(ಸಭೆಯನ್ನು 3 ಗಂಟೆ 55 ನಿಮಿಷಗಳಿಗೆ ಮುಂದೂಡಲಾಯಿತು)

(ಸಭೆಯು ಪುನಃ 4-10ಕ್ಕೆ ಪ್ರಾರಂಭವಾಯಿತು. ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಉಪಾಧ್ಯಕ್ಷರು:- ಹಾಲಿನ ಬೆಲೆ ಏರಿಕೆ ಬಗ್ಗೆ ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದ್ದೀರಿ. ವಾಟಾಳ್ ನಾಗರಾಜ್‌ರವರು. ಎರಡೆರಡು ನಿಮಿಷದಲ್ಲಿಯೇ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ.

ಉಪಾಧ್ಯಕ್ಷರು:- ಹಾಲಿನ ಬೆಲೆ ಏರಿಕೆ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಾರೆ. ಆಮೇಲೆ ತಾವು ಮಾತನಾಡಬಹುದು. (ಮಾನ್ಯ ಯಡಿಯೂರಪ್ಪನವರನ್ನು ಉದ್ದೇಶಿಸಿ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಹಾಲಿನ ಬೆಲೆ ಜಾಸ್ತಿಯಾಯಿತು ಎಂದು ಹೇಳಿ.

ಉಪಾಧ್ಯಕ್ಷರು:- ತಾವೂ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಮೊದಲು ಪ್ರಸ್ತಾಪ ಮಾಡಲಿ. ಹಾಲಿನ ದರ ಆಯಿತು, ಬಸ್‌ನ ದರ ಆಯಿತು, ವಿದ್ಯುತ್ ದರ ಆಯಿತು. ಜನರು ಬದುಕುವುದು ಹೇಗೆ ಎಂತ?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸ್ವಲ್ಪ ವಿಷ ಕೊಟ್ಟುಬಿಟ್ಟರೆ ಒಳ್ಳೆಯದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹಾಲಿನ ಜೊತೆಗೆ ಬೆಲೆ ಜಾಸ್ತಿ ಮಾಡಿರುವುದು ನೋಡಿದರೆ ರೈತನೂ ಉದ್ಧಾರವಾಗಲಿಲ್ಲ ಜಾನುವಾರುಗಳನ್ನು ಸಾಕಿದವನು. ಹಾಲಿಗೆ ಒಂದು ತೊಟ್ಟು ಪ್ರಮೀಳಾರವರು ಹೇಳಿದ ಹಾಗೆ ವಿಷ ಕೊಟ್ಟರೆ ಸರಿಹೋಗಬಹುದೇನೋ. ಬೆಳಿಗ್ಗೆ ಒಂದು ಲೋಟಾ ಚಹಾ ಕುಡಿಯುವುದು ತಪ್ಪಿಹೋಯಿತು. ಇವರ ಸರ್ಕಾರದ ನೀತಿಯಿಂದ. ಮುಂದೆ ಗತಿಯೇನು?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ,

ಉಪಾಧ್ಯಕ್ಷರು:- ತಾವು ಬೇಗ ಬೇಗ ಎರಡು ಎರಡು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಸರ್ಕಾರದಲ್ಲಿ ಯಾರಾದರೂ ಉತ್ತ ಕೊಡುವವರು ಬೇಕಲ್ಲ.

ಶ್ರೀ ಕೆ.ಬಿ.ಶಾಣಪ್ಪ (ಮಾನ್ಯ ಅಬ್ಕಾರಿ ಸಚಿವರು):- ನಾನು ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ಇರುವುದು ಆಲ್ಕೊಹಾಲ್‌ಗೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಹಾಲಿನ ಬದಲು ಆಲ್ಕೋಹಾಲ್ ಕೊಡುವುದಕ್ಕೆ ತಾವು ಇದ್ದೀರಿ. ಇದಕ್ಕೆ ಬೇರೆ ಮಂತ್ರಿಗಳು ಬೇಕು ಇಲ್ಲಿ. ಯಾರನ್ನು ಕೇಳಬೇಕು ನಾವು. ಮೊದಲಾದರೂ ಬಚ್ಚೆಗೌಡರಾದರೂ ಮಂತ್ರಿಗಳಾದರು. ಈಗ ಅವರೂ ಇಲ್ಲ. ಅವರು ಅಲ್ಲಿ ಹೊರಟು ಹೋಗಿ ಹಾಲಿನ ಬೆಲೆ ಜಾಸ್ತಿಯಯಿತು.

ವಿಷಯ:- (ಆ) ಹಾಲಿನ ದರ ಏರಿಕೆ ಕುರಿತು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೇ, ಸಾರಾಯಿ ಬಗ್ಗೆ ಚರ್ಚೆ ಅದಕ್ಕೆ ಮುಂಚೆ ಹಾಲಿನ ದರದ ಬಗ್ಗೆ ಏಕಾಏಕಿ ಸದನ ನಡೆಯುತ್ತಾ ಇದೆ. ಸದನ ನಡೆಯುವಾಗ ಅವರು ಯಾವುದೇ ಬೆಲೆ ಏರಿಕೆಯಾಗಲಿ, ಒಂದು ಸರ್ಕಾರದ ನೀತಿ ಮಾಡುವುದಾಗಲಿ ಈ ರೀತಿ ಬೆಲೆ ಏರಿಕೆ ಮಾಡುವಾಗ ಸರ್ಕಾರ ಸದನದ ಮುಂದೆ ಇಂಥ ವಿಚಾರಗಳನ್ನು ಸಂಬಂಧಪಟ್ಟಂಥ ಸಚಿವರು ತರಬೇಕಾದದ್ದು ಅವರ ಕರ್ತವ್ಯ. ಇವತ್ತು ಯಾವುದನ್ನೂ ಇಲ್ಲಿಗೆ ಚರ್ಚೆಗೆ ತರದೆ ಒಂದೂವರೆ ರೂಪಾಯಿ ಹಾಲಿನ ದರ ಏರಿಸಿರುವುದು ಇದೆಯಲ್ಲ, ನಿಜವಾಗಿಯೂ ಇದೊಂದು ರೀತಿ ಜನರಿಗೆ ವಿಷವನ್ನು ಹಾಕುತ್ತಿದ್ದಾರೆ. ಇದು ಗ್ರಾಹಕರಿಗೂ ತೊಂದರೆ, ಮತ್ತು ಹಾಲು ಕೊಡುವ ಹಾಲಿನ ಮಾಲೀಕರಿಗಳಿಗೂ ತೊಂದರೆ. ಇದನ್ನು ಸರ್ಕಾರ ಒಂದು ವ್ಯವಸ್ಥಿತವಾಗಿ, ಒಂದು ವೈಜ್ಞಾನಿಕವಾಗಿ ಮಾಡುತ್ತಿಲ್ಲ. ಸುಮ್ಮನೇ ಪ್ರತಿ ಸಾರಿ ಬೆಲೆ ಏರಿಸತಕ್ಕದ್ದು. ಈಗ ವಿದ್ಯುಚ್ಛಕ್ತಿ ದರ ಏರಿಸಿ ಆಯಿತು. ಬಸ್ಸಿನ ದರವನ್ನು ಯಾವಾಗ ಏರಿಸುತ್ತಾರೋ ಗೊತ್ತಿಲ್ಲ. ಈಗಾಗಲೇ ಬಸ್‌ನ ದರ ಏರಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದೂ ಶುರುವಾಗುತ್ತದೆ. ನೀರಿನ ದರ ಏರಿಸಿದ್ದು ಆಯಿತು. ಈಗ ಹಾಲಿನ ದರವನ್ನು ಏರಿಸಿರತಕ್ಕದ್ದು ಸರ್ಕಾರ ಈ ಕೂಡಲೇ ಹಿಂದಕ್ಕೆ ಪಡೆಯಬೇಕು. ಇದು ತೀವ್ರವಾಗಿ ಜನರಿಗೆ ಬಹಳ ಅತ್ಯಂತ ಆಘಾತವಾಗುತ್ತದೆ. ಒಂದೂವರೆ ರೂಪಾಯಿ ಒಂದು ಲೀಟರ್‌ಗೆ ಏರಿಸಿತು ಅಂದರೆ ಪರಿಸ್ಥಿತಿ ಏನು? ಯಾವ ಆಧಾರದ ಮೇಲೆ ಇವರು ಒಂದೂವರೆ ರೂಪಾಯಿಯನ್ನು ಏರಿಸಿದ್ದಾರೆ? ಯಾವ ಕಾರಣಕ್ಕೋಸ್ಕರ ಏರಿಸಿದ್ದಾರೆಂದು ನಾನು ಕೇಳುತ್ತಿದ್ದೇನೆ. ಇದು ಸರಿಯಾದುದಲ್ಲ. ಸಂಬಂಧಪಟ್ಟ ಸಚಿವರು ಈ ಬಗ್ಗೆ ಒಂದು ಸ್ಪಷ್ಟವಾದ ತೀರ್ಮಾನವನ್ನು ಕೈಗೊಳ್ಳದೇ ತಮ್ಮ ಇಚ್ಛೆ ಬಂದ ಹಾಗೆ ದರವನ್ನು ಏರಿಸಿಕೊಂಡು ಹೋಗುತ್ತಿದ್ದರೆ ಇದು ಸರಿಯಾದ ನೀತಿ ಅಲ್ಲ. ಸಾರ್ ತಮಗೆ ಹೇಳುತ್ತಿದ್ದೇನೆ, ಈಗಾಗಲೇ ಎಂಟೂವರೇ ರೂಪಾಯಿ ಇದೆ. ಹತ್ತು ರೂಪಾಯಿ ದರ ಏರಿಸಿದ್ದಾರೆ. ಒಂದು ಕಡೆ ಮಾಡರ್ನ್ ಡೈರಿ ಎಂದು ಯಾವುದೋ ಇದೆ, ಅದು ದರ ಏರಿಸಿಲ್ಲ. ಇವರು ದರ ಏರಿಸಿದ್ದಾರೆ. ಇದೇನಿದು ಸರ್ಕಾರಕ್ಕೆ ನೀತಿ ನಿಯಮ ಬೇಡವೇ? ಈ ರೀತಿ ಆದರೆ ಇವರು ಸಾಮಾನ್ಯರನ್ನು ಕೊಂದು ಹಾಕುತ್ತಾರೆ. ಜನರಿಗೆ ಅಪಚಾರ ಮಾಡುತ್ತಿದ್ದಾರೆ. ಇದು ನಿಜವಾಗಿಯೂ ರಾಜ್ಯದ ಜನತೆಗೆ ಬಹಳ ಅತ್ಯಂತ ಘೋರ ಅನ್ಯಾಯ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಸರ್ಕಾರ ತಾವೇನು ಹಾಲಿನ ದರವನ್ನು ಏರಿಸಿದ್ದೀರಿ, ಅದನ್ನು ಈ ಕೂಡಲೇ ಹಿಂತೆಗೆದುಕೊಳ್ಳಬೇಕು.

ಏಕೆಂದರೆ ಒಂದೊಂದು ಮನೆಯವರು ಕನಿಷ್ಟ ತಿಂಗಳಿಗೆ 300, 400, 500 ರೂಪಾಯಿ ಜಾಸ್ತಿ ಕೊಡಬೇಕಾದ ಪರಿಸ್ಥಿತಿ ಬರುತ್ತದೆ.

ಉಪಾಧ್ಯಕ್ಷರು:- ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್:- ಈ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಸರ್ಕಾರ ಹೇಳಬೇಕು, ಹಾಲಿನ ದರವನ್ನು ಹಿಂತೆಗೆದುಕೊಂಡಿದ್ದೇವೆಂದು ಹೇಳಬೇಕು. ಅದನ್ನು ಬಿಟ್ಟು ಈ ಸಭೆಗೆ ಅಗೌರವ ಮಾಡಿದ್ದಾರೆ. ಸಭೆ ನಡೆಯುತ್ತಿರುವಾಗ ಹೊರಗಡೆ ಯಾರೋ ಒಬ್ಬ ಅಧಿಕಾರಿ ಹೇಳುತ್ತಾರೆ. ಇವತ್ತು ಯಾರೋ ಒಬ್ಬ ವ್ಯವಸ್ಥಾಪಕ ನಿರ್ದೇಶಕ ಹೇಳಿರತಕ್ಕ ಮಾತು. ಇದೇನು ಹೀಗೆ ಹೊರಟು ಬಿಟ್ಟರೆ, ಪರಿಸ್ಥಿತಿ ಏನು? ಎಲ್ಲಿಗೆ ನಾವು ಹೋಗಬೇಕು? ಎಲ್ಲಿಗೆ ತಲುಪಬೇಕಾಗಿದೆ? ಜನರ ಪ್ರಶ್ನೆ ಏನು? ಇದರ ಬಗ್ಗೆ ಸರ್ಕಾರ ಸ್ಪಷ್ಟ ಉತ್ತರವನ್ನು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಇದು ಒಂದು ರೀತಿಯ ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲವೇನು? ಈ ಸದನದ ಹಕ್ಕನ್ನು ಕಿತ್ತುಕೊಂಡಂತೆ ಆಗುವುದಿಲ್ಲವೇನು? ಸದನದ ಕಾರ್ಯಕಲಾಪಗಳು ನಡೆಯುವಂತಹ ಕಾಲದಲ್ಲಿ ಯಾವ ಅನಿವಾರ್ಯ ಪ್ರಸಂಗ ಬಂತೋ ಒಂದು ಲೀಟರ್ ಹಾಲಿಗೆ ಒಂದರಿಂದ ಒಂದೂವರೆ ರೂಪಾಯಿ ಏರಿಸುವಂತಹ ಸಂದರ್ಭ ಏನು ಬಂತು? ಎಂದು ಇಲ್ಲಿ ಹೇಳಬೇಕಲ್ಲ, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಲ್ಲ, ಚರ್ಚೆ ಆಗಬೇಕಲ್ಲ. ರಾತ್ರೋರಾತ್ರಿ ಯಾವುದೋ ಒಬ್ಬ ಅಧಿಕಾರಿ ಹೇಳಿಕೆಯನ್ನು ಕೊಡುತ್ತಾನೆ ಎನ್ನುವುದಾದರೆ ಬಹುಶಃ ಈ ಮನೆಯ ಒಂದು ಗೌರವ ಏನು ಇದೆ? ಸತ್ಸಂಪ್ರದಾಯಗಳನ್ನು ನಾವೇನು ಪರಿಪಾಲನೆ ಮಾಡಿಕೊಂಡು ಬಂದಿದ್ದೇವೆ, ಇದಕ್ಕೆ ಧಕ್ಕೆ ಬರುವಂತಹ ಕೆಲಸವನ್ನು ಸರ್ಕಾರ ಏಕೆ ಮಾಡಬೇಕು? ಸನ್ಮಾನ್ಯ ಉಪಾಧ್ಯಕ್ಷರೆ, ನೊಂದು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರದ ಮನಸ್ಸಿನಲ್ಲಿ ನಾವೇನು ಮಾಡಬಾರದ್ದನ್ನು ಮಾಡಿದರೂ ಸಹ ಜನ ಓಟು ಕೊಡುತ್ತಾರೆ ಯಡಿಯೂರಪ್ಪನವರೇ, ಲೋಕಸಭೆಗೆ ನಮ್ಮನ್ನು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಆಯ್ಕೆ ಮಾಡಿದ್ದಾರೆ, ಕೇಳುವುದಕ್ಕೆ ನೀವು ಯಾರು ಎಂದರೆ ನೋಡಿ ಸ್ವಾಮಿ, ನಾನು ನೊಂದು ಹೇಳುತ್ತಿದ್ದೇನೆ, 15 ವರ್ಷ ಆಯಿತು ಶಾಸಕನಾಗಿ. ಈ ರೀತಿ ಮೊದಲನೆಯ ಬೆಂಚಿನಲ್ಲಿ ಕ್ಯಾಬಿನೆಟ್ ಸಚಿವರು, ಉಪಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳು ಯಾರೂ ಇಲ್ಲದೇ ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಿ ನನಗೆ ಗೊತ್ತಿಲ್ಲ. ಅನೇಕ ಬಾರಿ ಇದನ್ನು ಪ್ರಸ್ತಾಪ ಮಾಡಿದ ಮೇಲೂ ಸಹ ಯಾರಿಗೂ ಇದು ಬೇಕಾಗಿಲ್ಲ. ಇದೊಂದು ರೀತಿ ಈ ಮನೆಯನ್ನು ಅಗೌರವವಾಗಿ ನೋಡುವಂತಹ ಪ್ರವೃತ್ತಿ ನಮ್ಮ ಮಂತ್ರಿಗಳಲ್ಲಿ. ಆ 45 ಮಂತ್ರಿಗಳೇ ಕುಳಿತುಕೊಳ್ಳದಿದ್ದರೆ ಅವರ ಜೊತೆ ಇರುವಂತಹ ಸದಸ್ಯರು ಹೇಗೆ ಕುಳಿತುಕೊಳ್ಳುತ್ತಾರೆ? ನನಗೆ ಆರೋಗ್ಯ ಸರಿ ಇಲ್ಲ. ನಾನು ಕುಳಿತಿದ್ದೇನೆ. ನಾನು ವಿರೋಧ ಪಕ್ಷದ ನಾಯಕನಾಗಿ ಇರಲಿಲ್ಲ ಎಂದಾಗ ನನ್ನ ಸದಸ್ಯರು

ಇಲ್ಲ ಎಂದು ಹೇಳುವುದಕ್ಕೆ ನನಗೇನು ನೈತಿಕ ಹಕ್ಕು ಉಳಿಯುತ್ತದೆ? ಇದೊಂದು ಭಾಗ. ಇನ್ನೊಂದು ಕಡೆ ಇವತ್ತು ಏನು ಮಾಡಬೇಕೆಂದು ಇದ್ದೀರಿ, ರಾಜ್ಯದ ಜನರನ್ನು? ನಿಮಗೆ ಓಟು ಕೊಟ್ಟು ಅಧಿಕಾರಕ್ಕೆ ತಂದಿರುವುದಕ್ಕೋಸ್ಕರ ಯಾವು ರೀತಿ ಶಿಕ್ಷೆ ಮಾಡಬೇಕೆಂದು ಇದ್ದೀರಿ? ಸ್ವಾಮಿ ಮಧ್ಯಮ ವರ್ಗದ ಜನ ಯಾರೋ ಒಬ್ಬ ಮೇಷ್ಟರು ಇದ್ದಾರೆ. ಎರಡೂವರೆ ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾರೆ. ವಿದ್ಯುತ್ ದರ ಜಾಸ್ತಿ ಮಾಡುವುದರಿಂದ ಎಇಚ್ ಇದ್ದರೆ ಅವನು ಪ್ರತಿ ತಿಂಗಳು ಖರ್ಚಿನಲ್ಲಿ ವಿದ್ಯುತ್ ದರವನ್ನು 250ರಿಂದ 250 ಕಟ್ಟುತ್ತಿದ್ದರೆ ಇನ್ನು ಮುಂದೆ 150 ರೂಪಾಯಿ ಜಾಸ್ತಿ ಆಗುತ್ತದೆ. ಮನೆಯಲ್ಲಿ ಎರಡು ಲೀಟರ್ ಹಾಲು ತರಿಸುವುದಾದರೆ ಎರಡು ರೂಪಾಯಿ ದಿವಸಕ್ಕೆ ಜಾಸ್ತಿ ಆಗುತ್ತದೆ, ತಿಂಗಳಿಗೆ 60 ರೂಪಾಯಿ ಜಾಸ್ತಿ ಆಯಿತು. ಅಂದರೆ ಅವನ ಆದಾಯ ಎಲ್ಲಿಂದ ಜಂಪ್ ಆಗುವುದಕ್ಕೆ ಸಾಧ್ಯ? ಅವನು ಬದುಕುವುದು ಹೇಗೆ? ನಾನು ಹೇಳುವುದು ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಎಲ್ಲಿ ಸೋರಿ ಹೋಗುತ್ತಿದೆ, ಅದನ್ನು ಸರಿಪಡಿಸಿಕೊಂಡು ಮುಂದೆ ಹೋಗುವುದು ಹೇಗೆ ಎಂದು ಯೋಚನೆ ನೀವು ಮಾಡಬಹುದಿತ್ತು? ;ಇಡೀ ರಾಜ್ಯದ ಜನರಿಗೆ ಇನ್ನೂ ಎರಡು ರೂಪಾಯಿ ಕಡಿಮೆಗೆ ಹಾಲು ಕುಡಿಸುವುದಕ್ಕೆ, ಆಲ್ಕೋಹಾಲ್‌ನಲ್ಲಿ ಏನು ಲೂಟಿ ಮಾಡುವುದಕ್ಕೆ ಹೊರಟಿದ್ದಾರೆ, ನಾನು ಅದನ್ನು ಪ್ರಸ್ತಾಪ ಮಾಡುವವನಿದ್ದೇನೆ. ಸುಮಾರು 150-200 ಕೋಟಿ ರೂಪಾಯಿ ಯಾವುದೋ ಒಂದು ಸಮಯ ಒಳಗಡೆ ಮಾಡಿಕೊಂಡು ಅವರಿಗೆ ಅನುಕೂಲ ಮಾಡಿಕೊಡಲು ಒಂದು ಕಡೆ ಹೋಗುತ್ತೀರಿ. ಇನ್ನೊಂದು ಕಡೆ ಸಾಮಾನ್ಯ ಜನ ಉಸಿರು ಕಟ್ಟುವಂತಹ ಪರಿಸ್ಥಿತಿಯಲ್ಲಿ ಜೀವನ ಮಾಡದೇ ಇರುವಂತಹ ಕಾಲದಲ್ಲಿ ಹಾಲಿನ ದರವನ್ನು ಏರಿಸಿದ್ದೀರಿ. ವಿದ್ಯುತ್ ದರವನ್ನು ಜಾಸ್ತಿ ಮಾಡಿದ್ದೀರಿ. ಸಾರಿಗೆ ದರ ಜಾಸ್ತಿ ಮಾಡುವವರಿದ್ದೀರಿ. ಸ್ವಾಮಿ ಇದರಿಂದ ಪೆಟ್ರೋಲಿಯಂ ದರ ಜಾಸ್ತಿ ಆಯಿತು. ಅದೆ ನಿಮಗೆ ಓಟು ಕೊಟ್ಟಂತಹ ಸಾಮಾನ್ಯ ಜನಗಳ ಜೀವನ ಹೇಗೆ? ಮುಂದೆ ಅವನು ಬದುಕುವುದು ಹೇಗೆ ಎಂದು ಚಿಂತನೆ ಮಾಡುವುದಕ್ಕೆ ನೀವು ಸಿದ್ಧ ಇಲ್ಲ ಎನ್ನುವುದಾದರೆ ನಿಮ್ಮ ಸರ್ಕಾರ ಬಂದಿರುವುದೇ ತೆರಿಗೆ ಹಾಕಿಕೊಂಡು ಹೋಗುವುದಕ್ಕಾ? ಬೆಳಿಗ್ಗೆ ಎದ್ದರೆ ಈ ತರಹ ಏರಿಸಿಕೊಂಡು ಹೋಗುವುದು. ಇನ್ನೊಂದು ಚುನಾವಣೆ. ಜನರನ್ನು ಹೇಗೆ ಮೂರ್ಖರು ಮಾಡಿಬಿಟ್ಟರಿ. ನೀವು ಮಾಡಬೇಕು ಎಂದಿದ್ದರೆ ಲೋಕಸಭಾ ಚುನಾವಣೆಯ ಮುಂಚೆ ಮಾಡಬಹುದಿತ್ತು. ಚುನಾವಣೆಗಳೆಲ್ಲಾ ಮುಗಿದ ಮೇಲೆ ಒಂದಾದ ಮೇಲೆ ಒಂದು ಬರೆ ಎಳೆಯುವುದಕ್ಕೆ ಹೊರಟಿದ್ದೀರಲ್ಲ. ಇದು ಜನ ಓಟು ಕೊಟ್ಟಿದ್ದಕ್ಕೆ ನೀವು ಕೊಡುತ್ತಿರುವ ಬಳುವಳಿನಾ? ನಿಮಗೆ ಶೋಭೆ ತರುವಂತಹ ಸಂಗತಿ ಅಲ್ಲ. ಜನ ಜೀವನ ಮಾಡುವುದಕ್ಕೆ ಆಗದೇ ಇರುವಂತಹ ಒಂದು ವಿಚಿತ್ರವಾದ ಪರಿಸ್ಥತಿ. ದಯಮಾಡಿ ತಾವೇನು ಹಾಲಿನ ದರವನ್ನು ಜಾಸ್ತಿ ಮಾಡಿದ್ದೀರಿ ಇದರಿಂದ ಯಾವುದೇ ರೈತನಿಗೆ ಅನುಕೂಲ ಆಗುವುದಿಲ್ಲ. ಅಲ್ಲೇನು ಡೈರಿಗಳನ್ನು ಸರಿಯಾಗಿ ನಡೆಸಬೇಕು ಅಲ್ಲಿ ಅನ್ಯಾಯ ನಡೆಯುತ್ತಿದೆ, ಅವ್ಯವಹಾರ ನಡೆಯುತ್ತಿದೆ, ಅದನ್ನು ನಿಲ್ಲಿಸಬೇಕು. ನೋ ಲಾಸ್ ನೋ ಪ್ರಾಫಿಟ್‌ನಲ್ಲಿ

ನಡೆಯಬೇಕು ಇಂತಹ ಸಂಸ್ಥೆಗಳನ್ನು ನೀವು ಮಾಡುವಂತಹವರು. ಅದನ್ನು ಮಾಡುವುದನ್ನು ಬಿಟ್ಟು ಇವತ್ತು ಈ ತರಹ ದರವನ್ನು ಜಾಸ್ತಿ ಮಾಡುವುದು ಒಂದು ಅಕ್ಷಮ್ಯ ಅಪರಾಧ. ನಾನು ಬಹಳ ಹೊತ್ತು ಈ ಬಗ್ಗೆ ಮಾತನಾಡಲು ಇಚ್ಛೆಪಡುವುದಿಲ್ಲ. ಬೇಕಾದಷ್ಟು ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ದಯಮಾಡಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಯಾರು ಅದಕ್ಕೆ ಜವಾಬ್ದಾರರು ಇದ್ದಾರೋ ನನಗೆ ಗೊತ್ತಿಲ್ಲ. ಇದು ದಯಮಾಡಿ ಹಾಲಿನ ದರವನ್ನು ಏನು ಏರಿಸಿದ್ದೀರಿ, ಅದನ್ನು ವಾಪಸ್ ಪಡೆಯಬೇಕೆಂದು ಅತ್ಯಂತ ಒತ್ತಾಯವನ್ನು ಮಾಡುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ವಿಚಿತ್ರ ಇದೆ. ಹೋದ ಸಲವೂ ಕೂಡ ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ತಾವು ಸದನವನ್ನು ಕರೆದಾಗ ತರಾತುರಿಯಲ್ಲಿ ಎಲೆಕ್ಟ್ರಿಸಿಟಿ ದರವನ್ನು ಏರಿಸಿದಿರಿ. ಇದು ಸರಿಯಲ್ಲ. ಸದನವನ್ನು ಕರೆದು ಕೇಳಿ ಅದರ ಬಗ್ಗೆ ಚರ್ಚೆ ಮಾಡಿ ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳಿ ನಾವೆಲ್ಲಾ ಅಜಿಟೇಟ್ ಮಾಡಿದ ಮೇಲೆ ಒಂದು ಕಮಿಟಿ ನೀವು ಮಾಡಬೇಕಾಯಿತು. ಈಗ ಪುನಃ ಪರಿಶೀಲನೆ ನಡೆದಿದೆ. ಇವತ್ತು ಸದನ ಇಲ್ಲಿ ಇದ್ದಾಗಲೂ ಕೂಡ ಯಾವುದೇ ಒಂದು ಪಾಲಿಸಿ ಡಿಸಿಷನ್, ಒಬ್ಬ ಅಧಿಕಾರಿ ಸದನದ ಹೊರಗಡೆ ಮಾಡುತ್ತಾನೆ. ಒಂದು ರೂಪಾಯಿ ದರವನ್ನು ಏರಿಸಬೇಕು ಎನ್ನತಕ್ಕದ್ದನ್ನು ಸದನದ ಹೊರಗಡೆ ಹೇಳುತ್ತಾನೆ. ಆದರೆ ಸದನದ ಒಳಗಡೆ ಒಂದು ಸ್ಟೇಟ್‌ಮೆಂಟ್ ಸರ್ಕಾರದಿಂದ ವತಿಯಿಂದ, ಹಾಲಿನ ದರವನ್ನು ಏರಿಸಬೇಕು ಎಂದು ಮಾಡಿದ್ದೇವೆ, ಈ ಕಾರಣಕ್ಕಾಗಿ ಎಂದು, ಹೇಳತಕ್ಕಂತಹ, ಒಂದು ಸ್ಟೇಟ್‌ಮೆಂಟ್ ಕೊಡತಕ್ಕಂಥ ಸೌಜನ್ಯ ಕೂಡ ಇಲ್ಲ. ನಿಜವಾಗಿಯೂ ಇದು ನೋಡಿದರೆ ಪ್ರಿವಿಲೇಜ್ ಆಗುತ್ತದೆ. ಹೋದಸಲ ಸಹ ಇದೇ ರೀತಿ ಆಯಿತು. ಆ ನೀರು ಬಿಡುವುದೂ ಕೂಡ ನಮ್ಮ ಕಾವೇರಿ 5 ಟಿಎಂಸಿ ನೀರು ಬಿಟ್ಟಿದ್ದೂ ಹಾಗೆ. ಸದನದ ಹೊರಗಡೆ ಮೊದಲು ಹೇಳಿಕೆ ಕೊಟ್ಟರು. ಆಮೇಲೆ ಸದನದಲ್ಲಿ ಅದನ್ನು ಒಪ್ಪಿಕೊಂಡರು. ಹೀಗೆ ಈ ಸದನದ ಸದಸ್ಯರನ್ನು ಕಡೆಗಾಣಿಸಿ ಈ ಸದನವನ್ನು ಕಡೆಗಾಣಿಸಿ ಮನಸ್ಸುಬಂದಂಗೆ ನಡೆದುಕೊಳ್ಳಬೇಕು ಎನ್ನತಕ್ಕ ಇಚ್ಛೆ ಸರ್ಕಾರದಲ್ಲಿ ಇದೆಯೋ ಹೇಗೆ ನನಗೆ ಗೊತ್ತಾಗುತ್ತಾ ಇಲ್ಲ. ಒಂದು ವೇಳೆ ನೀವು ಮಾಡಬೇಕು ಎಂದರೆ ಕರೆದು ಕೇಳಿ ಮಾಡಬೇಕಾಗಿತ್ತು. ಇದು ಒಂದು. ಆಮೇಲೆ ಒಂದೂವರೆ ವರ್ಷದಲ್ಲಿ ಎರಡು ಸಲ ತಾವು ದರ ಏರಿಸಿದ್ದೀರಿ. ಈ ಒಂದೂವರೆ ವರ್ಷದಲ್ಲಿ ಅವರ ಸರ್ಕಾರ ಬಂದ ಮೇಲೆ ಇದು ಎರಡನೆಯ ಸಲ. ಆದರೆ ಪದೇ ಪದೇ ನೀವು ಮೂರು ತಿಂಗಳಿಗೆ ಒಂದು ಸಾರಿ ಹಾಲಿನ ದರವನ್ನು ಏರಿಸುತ್ತಿದ್ದೀರಿ. ಒಂದು ಕಡೆ ನಾವು ಒಪ್ಪಿಕೊಳ್ಳುತ್ತೇವೆ. ನಾವೂ ಕೂಡ ರೈತರ ಪರವಾಗಿ ಇರತಕ್ಕವರು, ರೈತರ ಪರವಾಗಿ ಹೋರಾಟ ಮಾಡತಕ್ಕದ್ದು. ರೈತರ ಬಗ್ಗೆ ನಮಗೆಲ್ಲರಿಗೂ ಕೂಡ ಕಾಳಜಿ ಇದೆ. ಆದರೆ ಇನ್ನೊಂದು ಕಡೆ ಕನ್ಸೂಮರ್ಸ್‌ಗೂ ನಾವು ನೋಡಬೇಕು. ಇವತ್ತು ಹಾಲು ಉತ್ಪಾದನೆ ಮಾಡತಕ್ಕವರಿಗೆ ನಾವು ಒಂದು ಕಡೆ ನೋಡಿದರೆ ಇನ್ನೊಂದು ಕಡೆ ಹಾಲನ್ನು ಬಳಕೆ ಮಾಡತಕ್ಕಂಥವರು, ಅದರ ಉಪಯೋಗ ಮಾಡತಕ್ಕಂಥವರನ್ನು ಕೂಡ ನೋಡಬೇಕು.

ಬರ್ೀ ಹಾಲು ಕುಡಿಯುವಂತಹವರು ಶ್ರೀಮಂತರು ಇದ್ದಾರೆ. ಮಕ್ಕಳು ಹಾಲು ಕುಡಿಯುತ್ತವೆ, ಶಾಲೆಯ ಮಕ್ಕಳು ಹಾಲು ಕುಡಿಯುತ್ತಾರೆ. ಅನೇಕ ಮಧ್ಯಮ ವರ್ಗದವರು ಉಪಯೋಗ ಮಾಡುತ್ತಾರೆ. ಇವತ್ತು ಚಹಾ ಅಂಗಡಿಯಲ್ಲಿ, ಕೊನೆಗೆ ಈ ದೇಶದಲ್ಲಿ ಲೇಬರರ್ಸ್ ಹೊಟ್ಟೆ ಅನ್ನ ಇರಲಿಲ್ಲ ಎಂದರೆ ಕನಿಷ್ಟ ಪಕ್ಷ ಒಂದು ಕಪ್ ಟೀ ಕುಡಿಯೋಣ ಎಂದು ಹೇಳಿ ಅವ ಹಾಲು ಉಪಯೋಗ ಮಾಡುತ್ತಾನೆ. ಏನೂ ಇರಲಿಲ್ಲ ನಮ್ಮ ಕಡೆ ಕನಿಷ್ಟ ಪಕ್ಷ ಒಂದು ಚಾಯ್ ಅಥವಾ ಡಬಲ್ ರೋಟಿ ತಿಂದು ಜೀವನ ಮಾಡುತ್ತಾನೆ. ಹೀಗೆ ಬ್ರೆಡ್ ಸಹ ಅದಕ್ಕೆ ಇದನ್ನು ತರಾತುರಿಯಲ್ಲಿ ಒಂದರ ಮೇಲೊಂದು ಈಗಾಗಲೇ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಏನೋ ನಮಗೆ ಅಧಿಕಾರ ಕೊಟ್ಟಿದ್ದಾರೆ, ಜನ ನಂಬಿದ್ದಾರೆಂದು ತಿಳಿದುಕೊಂಡು ರೈಟ್ ಫ್ರಮ್ ಎಲೆಕ್ಟ್ರಿಸಿಟಿ ಹಿಡಿದುಕೊಂಡು ಹಾಲು, ಪೆಟ್ರೋಲ್, ಡೀಸಲ್ ದರ ಏರಿಸಿದ್ದೀರಿ. ನೀವು ಈ ದೇಶವನ್ನು ಏನು ಮಾಡಬೇಕೆಂದು ಇದ್ದೀರಿ? ಅದಕ್ಕೆ ದಯವಿಟ್ಟು ಇದಕ್ಕೆ ಒಂದು ತಡೆ ಹಿಡಿಯಿರಿ ಸ್ವೇ ಆದರೂ ಮಾಡಿ. ಮಾಡಿ ಮುಂದೆ ಬೇಕಾದರೆ ಅದು ಕಾಸ್ಟ್ ಗೀಸ್ಟ್ ವರ್ಕಪ್ ಮಾಡಿ ಎಷ್ಟರಮಟ್ಟಿಗೆ ಇದು ರೈತರಿಗೆ ಲುಕ್ಸಾನು ಆಗುತ್ತದೆ. ಡೈರಿಯದು ಒಂದೇ ಪ್ರಶ್ನೆ ಅಲ್ಲ. ಡೈರಿಯಲ್ಲಿ ಏನು ಲೂಟಿ ಆಗುತ್ತಿದೆ, ಎಷ್ಟು ಅಲ್ಲಿ ಇವತ್ತು ಲುಕ್ಸಾನು ಆಗುತ್ತಿದೆ. ಆ ಲುಕ್ಸಾನು ಏಕೆ ಆಗುತ್ತದೆ ಎಂದು ತಿಳಿದುಕೊಳ್ಳೋಣ. ತಿಳಿದುಕೊಂಡು ಆಮೇಲೆ ಉಳಿದಂತಹವನ್ನು ಯೋಚನೆ ಮಾಡಿಕೊಂಡು ಎಷ್ಟರಮಟ್ಟಿಗೆ ಮಾಡಬೇಕು ಎನ್ನತಕ್ಕದ್ದು ಆಗುತ್ತದೆ. ಆದ್ದರಿಂದ ದಯವಿಟ್ಟು ತಾವು ಇದರ ಬಗ್ಗೆ ಗಮನ ಹರಿಸಿ, ತಕ್ಷಣ ಆ ಒಂದು ಪ್ರೈಸ್ ರೈಸ್ ಮಾಡಿರತಕ್ಕಂತಹ ನೋಟಿಫಿಕೇಶನ್ ಇವತ್ತು ಇಶ್ಯೂ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಸ್ಟೇ ಮಾಡಬೇಕು. ಮತ್ತೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಪಶುಸಂಗೋಪನಾ ಸಚಿವರನ್ನು ಕರೆಯಿಸಿ ಕುಳಿತು ಚರ್ಚೆ ಮಾಡಿ ಆಮೇಲೆ ಬೇಕಾದರೆ ಒಂದು ತೀರ್ಮಾನಕ್ಕೆ ಬರೋಣ. ಎಲೆಕ್ಟ್ರಿಸಿಟಿ ವಿಚಾರದಲ್ಲಿ ಯಾವ ರೀತಿಯಲ್ಲಿ ಮಾಡಿದ್ದೇವೆ, ಆ ರೀತಿಯ ಒಂದು ತೀರ್ಮಾನಕ್ಕೆ ಬರೋಣ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರದ ಶಾಸಕನಾಗಿರುವ ನನಗೆ ಮಾತನಾಡಲು ಅವಕಾಶ ಕೊಡಿ. ಸರ್ಕಾರ ಹಾಲಿನ ದರ ಏರಿಸಿರುವುದರಿಂದ ನಗರದ ನಾಗರಿಕರ ಮೇಲೆ ಯಾವ ರೀತಿ ಹೊರೆ ಬೀಳುತ್ತದೆಂದು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಆರ್.ಶ್ರೀನಿವಾಸ್:- ನಾವು ಕೋಲಾರ ಜಿಲ್ಲೆಯವರಾಗಿದ್ದು, ನಮ್ಮ ಜಿಲ್ಲೆಯಿಂದಲೇ ಹೆಚ್ಚು ಪ್ರಮಾಣದಲ್ಲಿ ಹಾಲನ್ನು ಸರಬರಾಜು ಮಾಡುತ್ತಿರುವುದರಿಂದ ನಮಗೂ ಮಾತನಾಡಲು ತಾವು ಅವಕಾಶ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು:- ಈ ವಿಷಯದ ಬಗ್ಗೆ ತಾವು ಮುಂಚಿತವಾಗಿಯೇ ನೋಟೀಸ್ ಕೊಡದೆ ಪ್ರಸ್ತಾಪಿಸಿರುವುದಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್:- ಹಾಲಿನ ಬೆಲೆಯೂ ಕೂಡ ನೋಟೀಸ್ ಕೊಡದೆ ಏರಿಸಿರುವುದಾಗಿದೆ. ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿರಬಹುದು, ಜಲಮಂಡಳಿ ಇರಬಹುದು, ಈಗ ಬೆಂಗಳೂರು ಡೈರಿಯ ಸರದಿಯಾಗಿದ್ದು, ಇವುಗಳು ಒಂದರ ಮೇಲೊಂದರಂತೆ ಬೆಲೆ ಏರಿಸುವಲ್ಲಿ ಸ್ಪರ್ಧೆಗಿಳಿದಿರುವ ಹಿನ್ನೆಲೆಯಲ್ಲಿ ಇವೊತ್ತು ನಾಗರಿಕರ ಮೇಲೆ ಹೊರೆ ಹೇರುತ್ತಿವೆ. ಪ್ರಾಯಶಃ ಬಡ ನಾಗರಿಕರ ಮಕ್ಕಳು ಯಾರಿದ್ದಾರೋ, ಅವರನ್ನು ಇವರು ಅಶ್ವತ್ಥಾಮರನ್ನಾಗಿ ಮಾಡಲು ಹೊರಟಿದ್ದಾರೆ. ಮಹಾಭಾರತದಲ್ಲಿ ಅಶ್ವತ್ಥಾಮ ಮಗುವಾಗಿದ್ದಾಗ ಹಾಲು ಕೊಡದೆ ಹಿಟ್ಟಿನ ನೀರನ್ನು 'ಹಾಲು' ಎಂದು ಹೇಳಿ ಕುಡಿಸಿದರಂತೆ.

ಈಗ ಬೆಂಗಳೂರು ಡೈರಿ ಇರಬಹುದು ಅಥವಾ ಕರ್ನಾಟಕ ಹಾಲು ಮಹಾಮಂಡಳಿ ಇರಬಹುದು, ಈ ಸಂಸ್ಥೆಗಳು ಅದೇ ಹೆಜ್ಜೆ ಇಡುತ್ತಿವೆ. ಬೆಂಗಳೂರು ಡೈರಿಯಲ್ಲಾಗುತ್ತಿರುವ ಸೋರಿಕೆಯನ್ನು ನಿಲ್ಲಿಸದೆ, ತಪ್ಪುಗಳನ್ನು ಸರಿಪಡಿಸಿಕೊಳ್ಳದೆ, ದರ ಏರಿಸುವ ಮೂಲಕ ನಾಗರಿಕರ ಮೇಲೆ ಏನು ಹೊರೆ ಹೇರಲಾಗುತ್ತಿದೆ, ಇದನ್ನು ನಾನು ಬೆಂಗಳೂರು ನಗರದ ನಾಗರಿಕರ ಪರವಾಗಿ ಖಂಡಿಸುತ್ತೇನೆ. ಅಷ್ಟೇ ಅಲ್ಲ, ಈ ರೀತಿ ಒಂದರ ಮೇಲೊಂದರಂತೆ ದರವನ್ನು ಏರಿಸುತ್ತಾ ಹೋದರೆ, ಆ ಬಡ ನಾಗರಿಕನಿಗೆ ಯಾರು ಸಂಬಳವನ್ನು ಜಾಸ್ತಿ ಮಾಡುತ್ತಾರೆ? ಹೆಚ್ಚಿಸಿರುವ ದರಕ್ಕೆ ಎಲ್ಲಿಂದ ಆತ ದುಡ್ಡು ತಂದು ಕೊಡುತ್ತಾನೆ? ವಿದ್ಯುಚ್ಛಕ್ತಿ ದರ ಏರಿಸಿದರೆ ಅದಕ್ಕೆ ದುಡ್ಡು ಕೊಡಬೇಕು, ನೀರಿನ ಬೆಲೆ ಏರಿಸಿದರೆ ಅದಕ್ಕೆ ದುಡ್ಡು ಕೊಡಬೇಕು, ಬಿ.ಟಿ.ಎಸ್. ಪ್ರಯಾಣ ದರ ಜಾಸ್ತಿ ಮಾಡಿದರೆ ಅದಕ್ಕೂ ದುಡ್ಡು ಕೊಡಬೇಕು. ಈ ರೀತಿ ಜಾಸ್ತಿ ಮಾಡುತ್ತಾ ಹೋದರೆ ಅವನ ವರಮಾನದ ಬಗ್ಗೆ ಯಾರಾದರೂ ಯೋಚಿಸುತ್ತಿದ್ದೀರಾ? ಸಂಸ್ಥೆಗಳಲ್ಲಾಗುತ್ತಿರುವ ಸೋರಿಕೆಯನ್ನು ತಡೆಗಟ್ಟದೆ, ಕೊರತೆಗಳನ್ನು ಪೂರೈಸಿಕೊಳ್ಳದೆ, ದರ ಏರಿಸುವ ಮೂಲಕ ನಾಗರಿಕರ ಮೇಲೆ ಏನು ದಬ್ಬಾಳಿಕೆ ನಡೆಸುತ್ತಿದ್ದೀರಿ, ಇದನ್ನು ನಾಗರಿಕ ಕ್ಷಮಿಸುವುದಿಲ್ಲ. ನಾನು ಬಡ ನಾಗರಿಕರ ಪರವಾಗಿ ಕೇಳಿಕೊಳ್ಳುವುದೇನೆಂದರೆ, ದಯಮಾಡಿ ಈ ರೀತಿ ಯಾವುದನ್ನೂ ಏರಿಕೆ ಮಾಡಬೇಡಿ. ಮಕ್ಕಳು ಆನಂದದಿಂದ ಹಾಲನ್ನು ಕುಡಿಯುವ ಪರಿಸ್ಥಿತಿ ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಆರ್.ಶ್ರೀನಿವಾಸ್ (ಮುಳಬಾಗಿಲು):- ಮಾನ್ಯ ಉಪಾಧ್ಯಕ್ಷರೆ, ನಾನು ಕೋಲಾರ ಜಿಲ್ಲೆಯ ಮುಳಬಾಗಿಲು ಜನತೆಯ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ. ಬಹುಶಃ ಹಾಲು ಉತ್ಪಾದನೆಯಲ್ಲಿ ಇಡೀ ಕರ್ನಾಟಕದಲ್ಲೇ ಎರಡನೇ ಸ್ಥಾನವನ್ನು ಹೊಂದಿರುವ ಕೋಲಾರ ಜಿಲ್ಲೆಯಲ್ಲಿ ಪ್ರತಿ ದಿವಸಕ್ಕೆ ಮೂರು ಲಕ್ಷ ಹದಿನೈದು ಸಾವಿರ ಲೀಟರುಗಳಿಂದ ಮೂರು ಲಕ್ಷ ಇಪ್ಪತ್ತೈದು ಸಾವಿರ ಲೀಟರ್‌ಗಳವರೆಗೆ ಹಾಲನ್ನು ಸರಬರಾಜು ಮಾಡುತ್ತಿದ್ದು, ಜಿಲ್ಲೆಯಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟು ಹಾಲು ಉತ್ಪಾದಿಸುವ ಸಂಘ-ಸಂಸ್ಥೆಗಳಿವೆ. ಇವೊತ್ತು ಹಾಲಿನ ಬೆಲೆ ಏರಿಸುವ ಕುರಿತು ಸರ್ಕಾರ

ಏನು ನಿರ್ಣಯ ತೆಗೆದುಕೊಂಡಿದೆ, ಇದನ್ನು ಸ್ವಾಗತಿಸುತ್ತಾ ಹಾಲಿನ ಉತ್ಪಾದನೆಯೊಂದರಿಂದಲೇ ಜೀವನ ಸಾಗಿಸುತ್ತಿರುವ ಅನೇಕ ಕುಟುಂಬಗಳಿರುವ ಜಿಲ್ಲೆಯೆಂದರೆ ಕೋಲಾರ ಜಿಲ್ಲೆಯಾಗಿದೆ. ಇವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಸರ್ಕಾರ ಲೀಟರ್‌ಗೆ ಹಾಲಿನ ಬೆಲೆಯನ್ನು ಹತ್ತು ರೂಪಾಯಿಗಳಿಗೆ ಏರಿಸಿರುವುದಕ್ಕೆ ಪ್ರತಿಭಟಿಸುವ ನೀವು ಇವೊತ್ತು ಒಂದು ಬಾಟಲಿ ಬಿಸ್ಲೇರಿ ನೀರಿಗೆ ಹನ್ನೆರಡು ರೂಪಾಯಿಗಳನ್ನು ತೆತ್ತು ಕೊಳ್ಳುವ ಬಂಡವಾಳ ಶಾಹಿಗಳ ಬಗ್ಗೆ ಯಾರೂ ಕೂಡ ಮಾತನಾಡುವುದಿಲ್ಲ. ರೈತರು ಹಸುವನ್ನು ಸಾಕುವುದು ತುಂಬಾ ಕಷ್ಟಕರವಾಗಿರುವುದರಿಂದ, ಅವರು ಉತ್ಪಾದಿಸುವ ಹಾಲಿಗೆ ಲೀಟರ್‌ವೊಂದಕ್ಕೆ ಹತ್ತು ರೂಪಾಯಿಗಳಷ್ಟು ಏರಿಸಿರುವುದನ್ನು ಖಂಡಿಸುವುದು ಸರಿಯಲ್ಲ. ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರ ಬಡವರ ಪರವಾಗಿರುವ ಪಕ್ಷವಾಗಿದ್ದರೆ..... ಜನಸಂಖ್ಯೆಯಲ್ಲಿ ಶೇಕಡ ಎಂಬತ್ತೈದರಷ್ಟು ರೈತಾಪಿ ಜನರಿದ್ದು ಅವರು ಉತ್ಪಾದಿಸುವ ಹಾಲಿನ ಬೆಲೆಗೆ ಲೀಟರ್ ಒಂದಕ್ಕೆ ಹತ್ತು ರೂಪಾಯಿಗಳನ್ನು ಮಾಡಿರುವುದು ಕಡಿಮೆಯೆಂದೇ ಹೇಳಬೇಕು. ಒಂದು ಬಾಟಲ್ ಬಿಸ್ಲೇರಿ ವಾಟರ್‌ಗೆ ಏನು ದರವನ್ನು ಕೊಡುತ್ತೀರೋ ಅದಕ್ಕಿಂತ ಜಾಸ್ತಿ ದರವನ್ನು ಹಾಲಿಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೊತ್ತು ಹಳ್ಳಿಯಲ್ಲಿ ಜೀವನ ಸಾಗಿಸುತ್ತಿರುವ ಜನರಿಗೆ ಯಾವ ಕಷ್ಟ ಬಂದೊದಗಿದೆಯೆಂಬುದು ತಮಗೆಲ್ಲಾ ಗೊತ್ತಿದೆ. ಎರಡು ರೂಪಾಯಿ ಇರುವ ಒಂದು ಸೋಪಿನ ಬೆಲೆಯನ್ನು ನಾಲ್ಕು ರೂಪಾಯಿಗಳಿಗೇರಿಸಿದರೆ ಯಾವ ಶಾಸಕರು ಕೂಡ ಪ್ರತಿಭಟಿಸಲಿಲ್ಲ, ಒಂದು ಅಂಗಿಯನ್ನು ಹೊಲಿಸಬೇಕಾಗಿದ್ದಲ್ಲಿ ಇವೊತ್ತು ನೂರೈವತ್ತು ರೂಪಾಯಿಗಳು ತಗಲುತ್ತದೆ. ಒಬ್ಬ ಸಾಮಾನ್ಯ ರೈತ ಜೀವನ ಮಾಡಬೇಕಾದರೆ ಪ್ರತಿ ದಿವಸಕ್ಕೆ ಆತನಿಗೆ ನಲವತ್ತರಿಂದ ಐವತ್ತು ರೂಪಾಯಿಗಳಷ್ಟು ಖರ್ಚಿರುತ್ತದೆ. ಹಸು ಇಟ್ಟಿರುವ ಒಬ್ಬ ರೈತ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಅದಕ್ಕೆ ಮೇವು ಹಾಕಿ ಕೇವಲ ಐದು ಲೀಟರ್‌ಗಳಷ್ಟು ಮಾತ್ರ ಹಾಲು ಕರೆಯುವ ವ್ಯವಸ್ಥೆಯಿದೆ. ಒಂದು ಹಸು ಕೊಂಡುಕೊಳ್ಳಬೇಕಾದರೆ ಹನ್ನೆರಡು ಸಾವಿರದಿಂದ ಹದಿನೈದುಸಾವಿರ ರೂಪಾಯಿಗಳಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಲೀಟರ್ ಹಾಲಿಗೆ ಹತ್ತು ರೂಪಾಯಿಗಳನ್ನು ನಿಗದಿಪಡಿಸಿರುವ ಸರ್ಕಾರದ ನಿರ್ಧಾರ ಸೂಕ್ತವಾಗಿದೆ. ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಸರ್ಕಾರದ ನಿರ್ಧಾರವನ್ನು ಇವೊತ್ತು ಕೋಲಾರ ಜಿಲ್ಲೆಯ ಎಲ್ಲಾ ರೈತರು ಸ್ವಾಗತಿಸುತ್ತಿದ್ದು, ದಯಮಾಡಿ ಇದಕ್ಕೆ ಮಾನ್ಯ ಸದಸ್ಯರುಗಳು ಬೆಂಬಲ ಕೊಡಬೇಕು. ಇದರ ಬಗ್ಗೆ ಮುಂದೆ ಯಾವುದೇ ವಿಧವಾದ ಚರ್ಚೆಯಿಲ್ಲ, ಏರಿಸಿರುವ ಬೆಲೆಯನ್ನು ಕಡಿಮೆ ಮಾಡುವ ವ್ಯವಸ್ಥೆ ಮಾಡಬಾರದೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಲಕ್ಷ್ಮಯ್ಯ:- ಮಾನ್ಯ ಉಪಾಧ್ಯಕ್ಷರೆ, ಒಂದು ಹಸುವಿನ ಬೆಲೆ ಹತ್ತು ಸಾವಿರ ರೂಪಾಯಿಗಳು. ಹಸು ಬದುಕಿದ್ದರೆ ಆರು ತಿಂಗಳುಗಳ ಕಾಲ ಹಾಲು ಕೊಡುತ್ತದೆ, ಸತ್ತು ಹೋದರೆ ಹಾಲು ಕೊಡುವುದಿಲ್ಲ. ಹಳ್ಳಿಯಲ್ಲಿರುವ ರೈತರು ಬಹಳ

ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಬಡ ಕೂಲಿ ಕಾರ್ಮಿಕರು ಹಸು ಸಾಕಿ ಹಾಲು ಕರೆದು ಜೀವನ ನಿರ್ವಹಿಸಿಕೊಳ್ಳುತ್ತಾರೆ. ನೈಸರ್ಗಿಕವಾಗಿ ಲಭ್ಯವಾಗುವ ನೀರನ್ನು ಬಾಟಲಿಯಲ್ಲಿ ತುಂಬಿ ಸೀಲ್ ಮಾಡಿರುವ ಬಿಸ್ಲೇರಿ ವಾಟರ್‌ನ ಬೆಲೆ ಹದಿನೈದು ರೂಪಾಯಿಲಿಗಳಷ್ಟಿದೆ. ಇವೊತ್ತು ಹಾಲು ಮಾರುವ ರೈತರು ಸಂಕಷ್ಟದಲ್ಲಿರುವುದರಿಂದ ಒಂದು ಲೀಟರ್‌ಗೆ ಹತ್ತು ರೂಪಾಯಿಗಳಷ್ಟು ದರವನ್ನು ಸರ್ಕಾರ ಏರಿಸಿದರೆ ಮಾನ ಸದಸ್ಯರು ವಿರೋಧಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಮಹಿಳಾ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮಾತನಾಡಲು ಎದ್ದು ನಿಂತರು)

ನೀವು ಹಸು ಸಾಕಿದ್ದೀರೋ? ಎಷ್ಟು ಹಸುಗಳನ್ನು ಸಾಕಿದ್ದೀರೆಂದು ದಯವಿಟ್ಟು ಹೇಳಲಿ. ನಮ್ಮಲ್ಲಿ ಐವತ್ತು ಸಾವಿರದಷ್ಟು ಹಸುಗಳಿವೆ. ಆದುದರಿಂದ, ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಒಂದು ಹಸುವನ್ನು ಸಾಕುವುದು ತುಂಬಾ ಕಷ್ಟವಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನೀವು ಎಷ್ಟು ಹಸುಗಳನ್ನು ಸಾಕಿದ್ದೀರೆಂಬುದು ನಮಗೂ ಗೊತ್ತಿದೆ.

ಶ್ರೀ ಎಸ್.ಆರ್.ಲಕ್ಷ್ಮಯ್ಯ:- ನೀವು ಹಸು ಸಾಕಿದ್ದೀರೋ? ಹಾಲು ಕರೆಯುವುದು ಗೊತ್ತಿದೆಯೇ?..... ಗೊತ್ತಿಲ್ಲ.

(ಗೊಂದಲ)

+ ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಉಪಾಧ್ಯಕ್ಷರೆ, ಹಾಲಿನ ಬಗ್ಗೆ ಮಾತನಾಡಲು ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳಿಗೇ ಜಾಸ್ತಿ ಹಕ್ಕಿದೆ. ಮನೆಯಲ್ಲಿ ಮಕ್ಕಳಿಗೆ ಹಾಲು ಕೊಡಬೇಕಾದರೆ ನೀವಲ್ಲ ಬಂದು ಕೊಡುವುದು. ಅಳುತ್ತಿರುವ ಮಗುವಿಗೆ ಹಾಲು ಬೇಕೆಂದಾಗ ನೀವು ಕಛೇರಿಯಲ್ಲಿ ಕುಳಿತುಕೊಂಡಿರುತ್ತೀರಿ, ಮಗು ಅಳುತ್ತಿದ್ದರೆ ಮಗುವಿಗೆ ನೀವಲ್ಲ ಹಾಲನ್ನು ತಂದುಕೊಡುವುದು. ಇವೊತ್ತು ಹಾಲು, ತುಪ್ಪ ಹಾಕುವುದಕ್ಕೆ ಹಾಲಿಲ್ಲ, ಕುಡಿಯುವುದಕ್ಕೂ ಹಾಲಿಲ್ಲ. ಇವೊತ್ತು ಈ ಸರ್ಕಾರದಿಂದ ಏನು ಪರಿಸ್ಥಿತಿ ಬಂದಿದೆಯೆಂದರೆ ಹಾಲಿಗೂ ಗತಿಯಿಲ್ಲ. ಮೊನ್ನೆ ದಿವಸ ನನಗೊಬ್ಬರು ಪೊಲೀಸ್ ಕಾನ್‌ಸ್ಟೇಬಲ್ ಸಿಕ್ಕಿದ್ದರು. ಅವರು ಏನು ಹೇಳಿದರೆಂದರೆ, ಹಾಲಿನ ದರ ಏರಿಕೆ ಬಗ್ಗೆ ಮಹಿಳೆಯರ ಸಂಘಟನೆ ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ವರದಿ ಕೊಟ್ಟಿದೆ. ಒಬ್ಬ ಪೋಲೀಸ್ ಪೇದೆ ಏನು ಹೇಳದರೆಂದರೆ, 'ಅಮ್ಮಾವ್ರೆ, ಮನೆಯಲ್ಲಿ ಜಗಳವಾಗಿರುವುದರಿಂದ ಮೂರು ದಿವಸಗಳಿಂದ ಊಟ ಮಾಡಿಲ್ಲವೆಂದರು. ಏಕೆಂದು ಕೇಳಿದಾಗ ಗ್ಯಾಸ್ ಹಾಗೂ ಇನ್ನಿತರ ಬೆಲೆಗಳನ್ನು ಏರಿಸಿರುವುದರಿಂದ ಮನೆಯಲ್ಲಿ ಹೆಂಡತಿ ಹತ್ತಿರ ಮಾತನಾಡುವುದಕ್ಕೂ ಆಗಿಲ್ಲ. ಇದನ್ನು ನಿಮ್ಮ ಕಛೇರಿಯಲ್ಲಿರುವ ಪೊಲೀಸ್ ಅಧಿಕಾರಿಯೇ ಹೇಳಿದ್ದು ಹೊರತು ನಾನಲ್ಲ. ಇಂತಹ ಪರಿಸ್ಥಿತಿಯನ್ನು ತಂದಿಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಿಂದ ಸುಮಾರು ಇನ್ನೂರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಬಂದಿದ್ದರು. ಅವರು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ

ಏನು ಹೇಳಿದರು ಎಂದರೆ..... 'ನನ್ನ ಮಕ್ಕಳಿಗೆ ವಿಷ ಕೊಡುವ ಸ್ಥಿತಿ ಬಂದಿದೆ, ಬೆಲೆಯನ್ನು ಇಷ್ಟು ಪ್ರಮಾಣದಲ್ಲಿ ಏರಿಸಿದ್ದಾರೆ, ಬೆಲೆಯನ್ನು ಇಳಿಸದಿದ್ದರೆ ನನ್ನ ಮಕ್ಕಳೊಂದಿಗೆ ಸಾಮೂಹಿಕವಾಗಿ ಜಿಲ್ಲಾಧಿಕಾರಿ ಹತ್ತಿರ ಬಂದು ವಿಷ ಕುಡಿದು ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ' ಎಂದು ಮಹಿಳೆಯರು ಹೇಳಿದರು. ಈ ರೀತಿ ಹೇಳಿದ್ದುದು ನಾವೂ ಅಲ್ಲ, ನೀವೂ ಅಲ್ಲ. ಇವೊತ್ತು ವಿದ್ಯುಚ್ಛಕ್ತಿ ದರ, ನೀರಿನ ದರ, ಪೆಟ್ರೋಲ್ ದರ, ಡೀಸೆಲ್ ದರ ಮತ್ತು ಅಡುಗೆ ಅನಿಲದ ದರಗಳನ್ನು ಏರಿಸಿರುವುದರಿಂದ ಅಡುಗೆ ಮಾಡುವುದಕ್ಕಾಗುವುದಿಲ್ಲ. ಮಕ್ಕಳಿಗೆ ಕೊಡಲು ಒಂದು ಹಿಡಿಯಷ್ಟು ಗಂಜಿ ಕಾಯಿಸೋಣವೆಂದರೆ ಆಗುತ್ತಿಲ್ಲ, ಹಾಲುಕೊಡೋಣವೆಂದರೆ ಬೆಲೆ ಏರಿಕೆ ಮಾಡಿ ಅದಕ್ಕೂ ತೊಂದರೆಯುಂಟು ಮಾಡಿದ್ದೀರಿ. ಪರಿಸ್ಥಿತಿ ಈ ರೀತಿಯಾದರೆ ಕರ್ನಾಟಕದಲ್ಲಿರುವ ಎಲ್ಲಾ ಹೆಣ್ಣುಮಕ್ಕಳು ಮಂತ್ರಿಗಳ ಮನೆಗೆ ಮುತ್ತಿಗೆ ಹಾಕಿ ಅವರು ಮನೆಯಿಂದ ಹೊರಗೆ ಬರದಿರುವಂಥ ವಾತಾವರಣ ನೋಡಬೇಕಾಗುತ್ತದೆ. ನೀವು ಇಂತಹ ಪರಿಸ್ಥಿತಿಯನ್ನು ತರಬಾರದಾಗಿತ್ತು, ಅನ್ಯಾಯ ಮಾಡುತ್ತಿದ್ದೀರಿ. ಅಧಿವೇಶನ ನಡೆಯುತ್ತಿದ್ದಾಗಲೇ ಹಾಲಿನ ಬೆಲೆ ಏರಿಸಿದ್ದೀರಿ. ಹಾಲಿನ ದರ ಏರಿಸುವ ಬಗ್ಗೆ ವಿಧಾನಸಭೆ ಕಲಾಪ ನಡೆಯುತ್ತಿರುವಾಗ ಸದಸ್ಯರುಗಳಾದ ನಮ್ಮನ್ನು ಕೇಳಬೇಕೇ ಅಥವ ಬೇಡವೇ? ಇದರಿಂದ ಯಾರಿಗೆ ಕಷ್ಟವಾಗುತ್ತಿದೆ ಎನ್ನುವುದನ್ನು ಗಮನಿಸಬೇಕೇ? ಬೇಡವೇ? ತಾವು ಇಂತಹ ಪರಿಸ್ಥಿತಿ ನಿರ್ಮಾಣ ಮಾಡಿ ಅಕ್ಷಮ್ಯ ಅಪರಾಧ ಮಾಡಿರುವುದರಿಂದ, ಏರಿಸಿರುವ ಹಾಲಿನ ದರವನ್ನು ತಕ್ಷಣವೇ ತಾವು ವಾಪಸ್ಸು ತೆಗೆದುಕೊಳ್ಳಬೇಕು, ವಾಪಸ್ಸು ತೆಗೆದುಕೊಳ್ಳದಿದ್ದರೆ ಮುಂದೆ ಆಗುವ ಪರಿಣಾಮಕ್ಕೆ ನೀವೆಲ್ಲರೂ ಗುರಿಯಾಗುತ್ತೀರಿ, ಹೆಣ್ಣುಮಕ್ಕಳ ಶಾಪ ನಿಮಗೆ ತಟ್ಟಿದರೆ ನೀವು ಒಂದು ಕ್ಷಣವೂ ಅಧಿಕಾರದಲ್ಲಿರಲು ಸಾಧ್ಯವಿಲ್ಲವೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಾಲಿನ ಬೆಲೆಯನ್ನು ಏರಿಸಿದ್ದರೆ ಹಾಲು ಉತ್ಪಾದಿಸುವ ರೈತರಿಗೆ ತುಂಬಾ ಅನ್ಯಾಯವಾಗುತ್ತದೆಂದು ಮಾನ್ಯ ಸದಸ್ಯರಾದ ಲಕ್ಷ್ಮಯ್ಯನವರು ಹೇಳಿದ್ದಾರೆ. ಏನು ಸ್ವಾಮಿ ಅವರಿಗೆ ಅನ್ಯಾಯವಾಗುವುದು?

(ಗೊಂದಲ)

ಉಪಾಧ್ಯಕ್ಷರೆ, ನನಗೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕು. ಅವರು ಹೇಳಿದರಲ್ಲಾ, ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

(ಗೊಂದಲ)

ರೈತರಿಗೆ ಅನ್ಯಾಯವಾಗಿದ್ದರೆ ಅವರಿಗೆ ಸಬ್ಸಿಡಿ ಕೊಡಿ, ಈಗ ಸಬ್ಸಿಡಿ ಕೊಟ್ಟಿದ್ದೀರಲ್ಲಾ. ಇವೊತ್ತು ಸಾಮಾನ್ಯ ಜನರ ಮೇಲೆ ದರ ಏರಿಸುವ ಮೂಲಕ ಹೊರೆ ಹೇರುತ್ತಿರುವುದರ ಬಗ್ಗೆ ಯೋಚಿಸಬೇಕು. ರೈತರಿಗೆ ಅನ್ಯಾಯ ಮಾಡುತ್ತಿದ್ದೇವೆಂದು ಸಹಸ್ರಾರು ಜನ ಹೆಣ್ಣುಮಕ್ಕಳು ಕಣ್ಣೀರಿಡುವಂಥ ಪರಿಸ್ಥಿತಿಗೆ ದೂಡಬೇಡಿ ಮತ್ತು ಮನೆಯಲ್ಲಿರುವ ಅಕ್ಕ-ತಂಗಿಯರಿಗೆ, ಅವರ ಮಕ್ಕಳಿಗೆ ಅನ್ಯಾಯವೆಸಗುವ ಪರಿಸ್ಥಿತಿ ತರಬೇಡಿ.

4.40 ಪಿ.ಎಂ.

ಶ್ರೀಮತಿ ಎನ್.ಜ್ಯೋತಿರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ಶ್ರೀಮತಿ ನೇಸರ್ಗಿಯವರಿಗೆ ಹೆಣ್ಣುಮಕ್ಕಳ ಬಗೆಗಿನ ಕಳಕಳಿಯೇನಿದೆ ನಿಜವಾಗಿಯೂ ಸಂತೋಷದ ವಿಚಾರ. ಆದರೆ ಅವರು ಪಟ್ಟಣದ ಹೆಣ್ಣುಮಕ್ಕಳ ಬಗ್ಗೆ ಮಾತ್ರ ಕಾಳಜಿವಹಿಸಿದ್ದಾರೆ.

(ಗೊಂದಲ)

ತಾವು ಮಾತನಾಡಬೇಕಾದರೆ ನಾನು ಅಡ್ಡಿಬರಲಿಲ್ಲ, ತಾವು ನನಗೆ ಮಾತನಾಡಲು ಅವಕಾಶ ಕೊಡಬೇಕು. ಹಾಲು ಉತ್ಪಾದನೆಯಲ್ಲಿ, ಮತ್ತು ನನ್ನ ಗಮನಕ್ಕೆ ಬಂದಮಟ್ಟಿಗೆ ಹಳ್ಳಿಗಳಲ್ಲಿ ಪ್ರತಿಯೊಂದು ಹೆಣ್ಣುಮಕ್ಕಳು ಒಂದು ಹಸುವನ್ನಿಟ್ಟುಕೊಂಡು ಹಾಲು ಉತ್ಪಾದನೆ ಮಾಡಿ ತನ್ನ ಸಂಸಾರವನ್ನು ನಿರ್ವಹಣೆ ಮಾಡಿಕೊಳ್ಳತಕ್ಕ ಪರಿಸ್ಥಿತಿ ಇದೆ. ಆದರೆ ಉತ್ಪಾದಿಸಲ್ಪಟ್ಟ ಹಾಲಿಗೆ ಸರಿಯಾದ ಬೆಲೆ ಸಿಕ್ಕದೆ ಒದ್ದಾಡುತ್ತಿರತಕ್ಕ ವಿಷಯ ತಮಗೆಲ್ಲರಿಗೂ ಗೊತ್ತಿದೆ. ತಾವುಗಳು ಸರ್ಕಾರ ಹಾಲಿನ ಬೆಲೆ ಜಾಸ್ತಿ ಮಾಡಿದೆ ಅದಕ್ಕೆ ಪ್ರತಿಭಟನೆ ಮಾಡುವುದಾಗಿ ಹೇಳಬಹುದು, ಆದರೆ ಹಳ್ಳಿಗಳಲ್ಲಿ ಹಸುವನ್ನಿಟ್ಟುಕೊಂಡು ಹಾಲನ್ನು ಉತ್ಪಾದನೆ ಮಾಡಿ ಅದರಿಂದ ಬರುವ ಹಣದಿಂದ ಸಂಸಾರವನ್ನೇನು ಹೆಣ್ಣುಮಕ್ಕಳು ನಿರ್ವಹಣೆ ಮಾಡುತ್ತಿದ್ದಾರೆ ಅದಕ್ಕೆ ಈ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿರುವುದು ಸ್ವಾಗತಾರ್ಹವಾದುದು. ಈ ದೃಷ್ಟಿಯಿಂದ ಕೆ.ಎಂ.ಎಫ್.ರವರನ್ನು ಅಭಿನಂದಿಸುತ್ತೇನೆ. ಹತ್ತುಹದಿನೈದು ರೂಪಾಯಿಗಳನ್ನು ಬಿಸಿಲೇರಿ ನೀರಿಗೆ ಕೊಟ್ಟು ಕುಡಿಯುವುದರ ಬದಲಾಗಿ.... ನಾವು ನೀವು ಇಲ್ಲಿರುವ ಮಹನೀಯರೆಲ್ಲರೂ ಬಿಸಿಲೇರಿ ನೀರನ್ನು ಕುಡಿಯುತ್ತೇವೆ.

ಶ್ರೀ ರಮಾನಾಥರೈ:- ಆಡಳಿತ ಪಕ್ಷದವರು ಮಾತ್ರ ಬಿಸಿಲೇರಿ ನೀರನ್ನು ಕುಡಿಯುವುದು.

(ಗೊಂದಲ)

ಶ್ರೀಮತಿ ಎನ್.ಜ್ಯೋತಿರೆಡ್ಡಿ:- ಉಪಾಧ್ಯಕ್ಷರೆ, ತಾವು ದಯಮಾಡಿ ನನಗೆ ಮಾತನಾಡಲು ಅವಕಾಶ ಕೊಡಬೇಕು. ನಾವು ಯಾವಾಗಲೂ ಮಾತನಾಡಲು ಹೋಗುವುದಿಲ್ಲ. ಅಧ್ಯಕ್ಷರೆ ತಾವು ನನ್ನ ರಕ್ಷಣೆಗೆ ಬರಬೇಕು. ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿರುತ್ತೇವೆ, ನಾವು ಮಾತನಾಡುವಾಗ ಅವರು ಸುಮ್ಮನೆ ಕುಳಿತಿರಲು ಹೇಳಿ. ಅವರುಗಳೇನು ಅಷ್ಟು ಬೆಲೆಯನ್ನು ಕೊಟ್ಟು ನೀರನ್ನು ಕುಡಿಯುತ್ತಾರೆ ಅದಕ್ಕೆ ಬದಲಾಗಿ ಹಾಲನ್ನು ಕುಡಿದು ಬದುಕಬಹುದು. ಅಷ್ಟು ಹಾಲು ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ. ಅವರೇನು ಬೆಲೆ ಏರಿಸಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ತಾವುಗಳು ಕುಳಿತುಕೊಳ್ಳಿ. ನಿಮ್ಮ ನಾಯಕರು ಇದರ ಬಗ್ಗೆ ಸಾಕಷ್ಟು

ಮಾತನಾಡಿದ್ದಾರೆ.

ಡಾ: ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರವೇನು ಹಾಲಿನ ಬೆಲೆ ಜಾಸ್ತಿ ಮಾಡಿದೆ ಅದರಲ್ಲಿ ರೈತರಿಗೆ ಎಷ್ಟು ಕೊಡುತ್ತದೆ ಎಂಬ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ:- ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಮೇಲ್ಮನೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ತಾವು ಈ ಸಭೆಯ ಹಿರಿಯ ಸದಸ್ಯರುಗಳು, ಹಿರಿಯ ಸದಸ್ಯರುಗಳು ಈ ರೀತಿ ಮಾಡಿದರೆ ಸಭೆ ನಡೆಯುವುದು ಹೇಗೆ?

ಶ್ರೀ ರಮಾನಾಥ ರೈ:- ಬಿಸಿಲೇರಿ ನೀರನ್ನು ಕುಡಿಯುವವರು ಯಾರು ಎಂಬ ಬಗ್ಗೆ ತೀರ್ಮಾನ ಮಾಡಬೇಕು.

ಉಪಾಧ್ಯಕ್ಷರು:- ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಬೆಳಿಗ್ಗೆ ಮೇಲ್ಮನೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಪಶುಸಂಗೋಪನಾ ಸಚಿವರು ಬಂದಿದ್ದಾರೆ ಅವರು ಹೇಳಿಕೆ ಕೊಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ ಮಾನ್ಯ ಪಶುಸಂಗೋಪನಾ ಸಚಿವರಾದ ನಿಂಗಯ್ಯನವರಿಗೆ ಸಹಾಯ ಮಾಡಿ ಹೇಳುವುದಾದರೆ, ಅವರು ಪಾಪ ಆ ಇಲಾಖೆಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ ಹಾಲಿನ ದರದ ಏರಿಕೆ ಸರಿಯೆನ್ನುವವರು ಮೇಲಕ್ಕೆ ಕೈ ಎತ್ತಲಿ, ಸರಿಯಲ್ಲವೆನ್ನುವವರು ಇಲ್ಲವೆಂದು ಹೇಳಲಿ. ತಾವು ಮತಕ್ಕೆ ಹಾಕಿ. ಎಣಿಕೆಯಾಗಲಿ. ನೋಡಿ ಸರಿಯಲ್ಲ ಎನ್ನುವವರೇ ಹೆಚ್ಚಾಗಿದ್ದಾರೆ. ಸರಿಯೆಂದು ಹೇಳುವವರಲ್ಲಿ ಜನರೇ ಇಲ್ಲ.

ಉಪಾಧ್ಯಕ್ಷರು:- ಸಚಿವರು ಬಂದಿದ್ದಾರೆ, ಅವರು ಉತ್ತರ ಕೊಡುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್.ಶ್ರೀನಿವಾಸ್:- ನಾವು ಸರಿಯಲ್ಲವೆಂದು ಹೇಳುವವರು ಎಂಬತ್ತು ಪರ್‌ಸೆಂಟ್ ಇದ್ದೇವೆ.

ಅಧ್ಯಕ್ಷರು:- ತಾವುಗಳು ಹಿರಿಯ ಸದಸ್ಯರುಗಳು ಈ ರೀತಿ ಮಾಡಿದರೆ ಸಭೆ ನಡೆಸುವುದು ಹೇಗೆ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ನನ್ನದು ಕ್ರಿಯಾಲೋಪ.

ಉಪಾಧ್ಯಕ್ಷರು:- ಬೇಡಿಕೆಯ ಮೇಲೆ ಮಾತನಾಡಿ ನಿಯಮ 69ರ ಅಡಿಯಲ್ಲಿ ತಾವು ಈ ರೀತಿ ಮಾಡಿದರೆ ಹೇಗೆ. ಶೂನ್ಯ ವೇಳೆಯಲ್ಲಿ ಕ್ರಿಯಾಲೋಪ ಎತ್ತಲು ಹೇಗೆ ಸಾಧ್ಯ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ. ಇಬ್ಬರು ಮಹಿಳೆಯರ ಯುದ್ಧ ಬಹಳವಾಯಿತು. ಇಂದು ಗುರುವಾರ ರಾಹುಕಾಲದಲ್ಲಿ ಒಂದು ಪ್ರಶ್ನೆ ಕೇಳಿಬಿಟ್ಟೆ ಎಂದು ಕಾಣುತ್ತದೆ. ಈ ಇಬ್ಬರು ಮಹಿಳೆಯರು ಹೋರಾಟ ಮಾಡುವುದನ್ನು ನೋಡಿದರೆ ಮುಂದೆ 35 ಪರ್‌ಸೆಂಟ್ ಸದಸ್ಯರು ಮಹಿಳೆಯರನ್ನು ಇಲ್ಲಿ ತರಬೇಕೆಂದಿದ್ದಾರೆ, ಅಂದರೆ ಏಪ್ಪತ್ತೈದು ಮಂದಿ ಮಹಿಳೆಯರು ಇಲ್ಲಿಗೆ ಬಂದರೆ ನಮ್ಮ ಗತಿಯೇನು ಎಂಬ ಬಗ್ಗೆ ಯೋಚನೆ ಬಂದಿದೆ. ಜ್ಯೋತಿರೆಡ್ಡಿಯವರು ಮಾತನಾಡುವಾಗ ಎಲ್ಲರು ಹಾಲು ಕುಡಿಯಿರಿ, ಬಿಸಿಲೇರಿ ಕುಡಿಯಬೇಡಿ ಎಂದು ಹೇಳಿದರು. ದಿನವೂ ಎರಡು ಬಾಟೆಲ್ ಹಾಲನ್ನು ನಾವು ಕುಡಿದರೆ ಎಲ್ಲರೂ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಈ ರೀತಿ ಸಲಹೆ ಕೊಡುವುದು ಎಲ್ಲಾದರೂ ಉಂಟೆ! ಬಿಸಿಲೇರಿ ಬಾಟೆಲ್‌ನಷ್ಟು ಎರಡು ಬಾಟೆಲ್ ಹಾಲನ್ನು ಕುಡಿಯಿರಿ ಎಂದು ಅವರು ಹೇಳುತ್ತಾರಲ್ಲ ಇದು ಸಾಧ್ಯವೇ? ಮಾನ್ಯ ನಾಗೇಗೌಡರೇ, ಬಚ್ಚೇಗೌಡರೇ ಹೇಳಿ. ನೀರನ್ನು ಎರಡು ಬಾಟೆಲ್ ಕುಡಿಯಬಹುದು, ತೀರಾ ಮಿತಿಮೀರಿ ಬೀರ್‌ನ್ನು ಕುಡಿಯಬಹುದು ಆದರೆ ಹಾಲನ್ನು ಕುಡಿಯಲು ಖಂಡಿತ ಆಗುವುದಿಲ್ಲ. ನಾನಂತು ಬೀರನ್ನೂ ಬಿಸಿಲೇರಿ ನೀರನ್ನೂ, ಬಾಟೆಲ್ ಹಾಲನ್ನೂ ಕುಡಿಯುವುದಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ವಾಟಾಳ್ ನಾಗರಾಜ್ ಹೇಳಿದ್ದ ವಿಷಯಕ್ಕೆ ಸ್ಪಂದಿಸಿ ಹೇಳುವುದಾದರೆ, ರಾಷ್ಟ್ರೀಯ ಆವರೇಜ್ ಪ್ರಕಾರ ಒಬ್ಬರು 500 ಎಂ.ಎಲ್. ಹಾಲನ್ನು ಕುಡಿಯುತ್ತಾರೆ. ನಮ್ಮ ರಾಜ್ಯದಲ್ಲಿ ಒಬ್ಬರು ಆವರೇಜ್ ಆಗಿ 380 ಎಂ.ಎಲ್. ಹಾಲನ್ನು ಕುಡಿಯುತ್ತಾರೆ. ಕರ್ನಾಟಕದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಹಾಲನ್ನು ಕುಡಿಯುವುದಿದೆ. ಪರ್‌ಕ್ಯಾಪಿಟ ಕನ್‌ಸಮ್‌ಷನ್ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಇದೆ.

+ ಶ್ರೀ ಬಿ.ನಿಂಗಯ್ಯ (ಪಶುಸಂಗೋಪನಾ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಇತ್ತೀಚಿನ ದಿವಸಗಳಲ್ಲಿ ಹಾಲಿನ ಉತ್ಪಾದನಾ ವೆಚ್ಚ ಜಾಸ್ತಿಯಾಗಿದೆ. ರೈತರುಗಳೇನು ಹಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ ಅವರಿಗೆ ಉತ್ಪಾದನಾ ವೆಚ್ಚ ಜಾಸ್ತಿಯಾಗಿ ಬಹಳ ಕಷ್ಟವಾಗಿದೆ. ಕಾರಣ ಇವತ್ತು ಪೆಟ್ರೋಲಿಯಂ, ಡಿಸೇಲ್ ಮತ್ತು ಅವರುಗಳು ಬಳಸತಕ್ಕ ಮೇವು ಏನಿದೆ ಅದರ ಬೆಲೆ ಜಾಸ್ತಿಯಾಗಿದ್ದರಿಂದ ರೈತರಿಗೆ ಬಹಳಷ್ಟು ಕಷ್ಟವಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು 13 ಹಾಲಿನ ಒಕ್ಕೂಟಗಳು, ಒಂದು ಡೈರಿ ಇದೆ. ಈಗಾಗಲೇ ಸುಮಾರು 7-8 ತಿಂಗಳ ಹಿಂದೆ 9 ಹಾಲಿನ ಒಕ್ಕೂಟಗಳಲ್ಲಿ 10 ರೂ.ದರದಲ್ಲಿ ಹಾಲನ್ನು ಈ ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದಾರೆ. ಆದರೆ ಬೆಂಗಳೂರು, ಕೋಲಾರ, ಮಂಡ್ಯ, ತುಮಕೂರು ಮತ್ತು ಮದರ್ ಡೈರಿಯವರು ಮಾತ್ರ 8.50 ರೂ.ದರದಲ್ಲಿ

ಮಾರುತ್ತಿದ್ದಾರೆ. ಇವತ್ತು ಬೇರೆ ಪೂರಕ ವಸ್ತುಗಳ ಬೆಲೆ ಏರಿಕೆಯಿಂದಾಗಿ ಹಾಲು ಉತ್ಪಾದನೆ ಮಾಡತಕ್ಕವರಿಗೆ ಬಹಳಷ್ಟು ಕಷ್ಟವಾಗಿದೆ. ತಮಗೆ ಒಂದು ಅಂಕಿ ಅಂಶ ಕೊಡುತ್ತೇನೆ. ಬೆಂಗಳೂರಿನಲ್ಲಿ ನಿನ್ನೆಯವರೆಗೆ ಹಾಲಿನ ಉತ್ಪಾದಕರಿಗೆ ಕೊಡತಕ್ಕ ರೇಟ್ 6.44 ರೂ. ಕೋಲಾರದಲ್ಲಿ 6.80ರೂ., ಮಂಡ್ಯದಲ್ಲಿ 6.60 ರೂ., ಮೈಸೂರಿನಲ್ಲಿ 7ರೂ., ಹಾಸನದಲ್ಲಿ 5.87ರೂ., ಶಿವಮೊಗ್ಗ 6.62ರೂ., ತುಮಕೂರು 6ರೂ., ಧಾರವಾಡ 6.56ರೂ., ಮಂಗಳೂರಿನಲ್ಲಿ 7.52., ಬೆಳಗಾಂನಲ್ಲಿ 7.05 ರೂ., ಬಳ್ಳಾರಿಯಲ್ಲಿ 6.60ರೂ., ಗುಲ್ಬರ್ಗಾದಲ್ಲಿ 6.05 ರೂ., ಬಿಜಾಪುರದಲ್ಲಿ 6.20 ರೂ., ಮದರ್ ಡೈರಿಯಲ್ಲಿ 6.20 ರೂ. ಅನ್ನು ಪ್ರಕ್ಯೂರ್‌ಮೆಂಟ್ ಪ್ರೈಸಸ್ ಆಗಿ ಕೊಡುತ್ತಿದ್ದೇವೆ. ಆದರೆ ಇವತ್ತು ಬೆಲೆ ಏನು ಜಾಸ್ತಿಯಾಗಿದೆ, ಅದರ ಮೇಲೆ ನಾವು ನೋಡಿದಾಗ, ಆ ರೇಟ್‌ನಲ್ಲಿ ಅವರಿಗೆ ವರ್ಕ್‌ಔಟ್ ಆಗುವುದಿಲ್ಲ. ಆದುದರಿಂದ ಅದರ ಜೊತೆಗೆ ಹಾಲಿನ ದರ ನಿನ್ನೆಯವರೆಗೆ 5 ಡೈರಿಗಳಲ್ಲಿ, ಈ 9 ಡೈರಿಯನ್ನು ಬಿಟ್ಟು, ಬೆಂಗಳೂರು, ತುಮಕೂರು, ಕೋಲಾರ ಮತ್ತು ಮಂಡ್ಯ, ಮದರ್ ಡೈರಿಗಳಲ್ಲಿ 8.50 ರೂ. ದರದಲ್ಲಿ ಹಾಲನ್ನು ಮಾರುತ್ತಿದ್ದಾರೆ. ನಿನ್ನೆಯಿಂದ ಆ ಬೆಲೆಗೆ ಮಾರುವುದು ದುಸ್ತರ ಆಗಿ, ನಾಲ್ಕೂ ಒಕ್ಕೂಟದವರು ಒಂದು ಮೀಟಿಂಗ್ ಮಾಡಿ 10 ರೂ.ಗೆ ಹಾಲನ್ನು ಮಾರಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಇದು ಸರ್ಕಾರದ ಗಮನಕ್ಕೂ ಬಂತು. ನಾನು ಇದೆಲ್ಲ ಅಂಕಿ ಅಂಶಗಳನ್ನೂ ತೆಗೆಸಿ ನೋಡಿದಾಗ ನನಗನಿಸುತ್ತದೆ, ಏಪ್ರಿಲ್ 1996ರಂದು ಇದೇ 4 ಡೈರಿಗಳಲ್ಲಿ 7 ರೂ. ದರದಲ್ಲಿ ಹಾಲನ್ನು ಕೊಡುತ್ತಿದ್ದರು. ಮೇನಲ್ಲೂ ಕೂಡ 7 ರೂ.ಗೆ ಕೊಡುತ್ತಿದ್ದರು. ಆದರೆ ಜೂನ್‌ನಲ್ಲಿ ಕೊಡಲಿಕ್ಕೆ ಆಗದೇ ಒಕ್ಕೂಟದವರು 6.80 ರೂ.ಗೆ ಇಳಿಸಿದರು. ಅದು ಕಷ್ಟ ಆಗಿ ಈ ತಿಂಗಳಿನಲ್ಲಿ 6.30 ರೂ.ಗೆ ಇಳಿಸಿದ್ದಾರೆ. ಯಾವ ರೈತರು ತಾನೇ, ಉತ್ಪಾದಕರು ತಾನೇ ಈ ಒಕ್ಕೂಟಗಳಿಗೆ ಹಾಲನ್ನು ಕೊಡುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇದು ಅಲ್ಲದೇನೇ ಇವತ್ತು ಭಾರತ ಸರ್ಕಾರದಿಂದ ಈ ರಾಜ್ಯದಲ್ಲಿ 4 ಪ್ರೈವೇಟ್ ಡೈರಿಗಳಿಗೆ, ವಿಂಟೇಜ್, ಹೆರಿಟೇಜ್, ಇಂಡಿಯಾನಾ ಮತ್ತು ನೀಲಗಿರೀಸ್, ಇವುಗಳಿಗೆ ಪರವಾನಗಿ ಕೊಟ್ಟಿದೆ, ಹಾಲು ಸಂಸ್ಕರಣ ಮಾಡುವುದಕ್ಕೆ ಮತ್ತು ಹಾಲು ಉತ್ಪನ್ನಗಳನ್ನು ಮಾರುವುದಕ್ಕೆ. ಇದರಿಂದ ಏನಾಗಿದೆ ಎಂದರೆ, ಇವತ್ತು ಪೈಪೋಟಿ ಕೂಡ ಇದೆ. ಪ್ರೈವೇಟ್ ಡೈರಿಯವರು ಕಳೆದ 8 ತಿಂಗಳಿನಿಂದ 10 ರೂ.ದರದಲ್ಲಿ ಮಾರುತ್ತಿದ್ದಾರೆ. ಹೀಗಿರುವಾಗ ಈ ಹಾಲಿನ ಒಕ್ಕೂಟಗಳಿಗೆ ಮತ್ತು ಡೈರಿಗೆ, ಯಾರು 8 ರೂ. ದರದಲ್ಲಿ ಹಾಲನ್ನು ಮಾರುತ್ತಿದ್ದಾರೆ, ಅವರಿಗೆ ಯಾವ ರೈತರು ತಾನೇ ಹಾಲನ್ನು ತಂದು ಕೊಡುತ್ತಾರೆ? ಡೈರಿಯವರಿಗೆ ನಡೆಸಲಿಕ್ಕೆ ಆಗದೇನೇ ಅನಿವಾರ್ಯವಾಗಿ ಬೆಲೆ ಏರಿಸಬೇಕಾಯಿತು. 2-3 ತಿಂಗಳು ಬಹಳ ಕಷ್ಟಪಟ್ಟು ಅವರು ನಡೆಸಿದರು. ನಂತರ ನಡೆಸಲಿಕ್ಕೆ ಆಗುವುದಿಲ್ಲ ಎನ್ನತಕ್ಕಂತಹ ಒಂದು ಪರಿಸ್ಥಿತಿ ನಿರ್ಮಾಣವಾದ್ದರಿಂದ, 6.30 ರೂ.ಗೆ ನಾವ್ಯಾರೂ ರೈತರು ಕೊಡುವುದಿಲ್ಲ ಎನ್ನತಕ್ಕಂತಹ ಒಂದು ತೀರ್ಮಾನಕ್ಕೆ ರೈತರು ಬಂದಂತಹ ಸ್ಥಿತಿಯಲ್ಲಿ ದರವನ್ನು ಏರಿಸಲೇಬೇಕಾಯಿತು. ಇವತ್ತು ಏರಿಸಿರತಕ್ಕಂತಹ ದರದಲ್ಲಿ 7.64 ರೂಪಾಯಿಗಳನ್ನು ರೈತನಿಗೆ ಕೊಡಬೇಕೆಂದು

ಒಕ್ಕೂಟದವರು ತೀರ್ಮಾನ ಮಾಡಿದ್ದಾರೆ. ನಿನ್ನೆಯವರೆಗೆ 6.30 ರೂ. ಕೊಡುತ್ತಿದ್ದರು. ಈಗ ರೈತರಿಗೆ 1.20 ರೂ. ಜಾಸ್ತಿ ಕೊಡುತ್ತೇವೆ. ಅದೂ ಅಲ್ಲದೇ ಇವತ್ತು ಬೇರೆ ಬೇರೆ ದರಗಳು ಆಗುತ್ತಿದೆ. ಇಷ್ಟೆಲ್ಲಾ ಆದರೂ ಹಾಲಿಗೆ ಪ್ರತಿ ಲೀಟರ್‌ಗೆ 10.13 ರೂ. ವೆಚ್ಚ ಬರುತ್ತದೆ. ನಾವು 10 ರೂ.ಗೆ ಮಾರುತ್ತಿದ್ದೇವೆ. ಅಂದರೆ 13 ಪೈಸೆ ನಷ್ಟದಲ್ಲಿ ಮಾರುತ್ತಿದ್ದೇವೆ. 10 ರೂ.ಗೆ ದರವನ್ನು ಏರಿಸಿದರೂ ಕೂಡ ನಷ್ಟವಾಗುತ್ತಿದೆ. ಆ 13 ಪೈಸೆ ನಷ್ಟವೇನಾಗುತ್ತಿದೆ, ಅದನ್ನು ಭರಿಸಲಿಕ್ಕೆ ಈಗಾಗಲೇ ನಾನು ಹೇಳಿದ್ದೇನೆ, ಬೇರೆ ಏನು ಹಾಲಿನ ಉತ್ಪನ್ನಗಳಿವೆ, ಅವುಗಳ ಮಾರಾಟದಿಂದ ಈ ಒಂದು ನಷ್ಟವನ್ನು ಸರಿಪಡಿಸಕೊಳ್ಳಿ ಎಂದು ನಾನು ಹೇಳಿದ್ದೇನೆ. ಇವತ್ತು ತಮಗೂ ಗೊತ್ತಿರುವಂತೆ ಯಾವುದೋ ಒಂದು ಟೊಮೋಟೋ ಜ್ಯೂಸ್ ಸಾಸ್ ಇರಬಹುದು ಅಥವಾ ಬೇರೆ ಬೇರೆ ರೀತಿಯ ತಂಪು ಪಾನೀಯಗಳು ಇರಬಹುದು, ಅವುಗಳ ದರಗಳು 10-15 ರೂ. ಇದ್ದರೂ ಕೂಡ ನಾವು ಪ್ರಶ್ನೆ ಮಾಡತಕ್ಕ ಸ್ಥಿತಿಯಲ್ಲಿ ಇಲ್ಲ. ಯಾವ ರೈತ ಇವತ್ತು ಹಾಲನ್ನು ಉತ್ಪಾದನೆ ಮಾಡುತ್ತಾನೆ, ಅವನಿಗೆ 7.64 ರೂ. ಕೊಡತಕ್ಕದ್ದು ದುಸ್ತರ. ಆದರೆ ಈ ಸೊಸೈಟಿಗಳು ಅಥವಾ ಇವತ್ತು ಏನು ಒಕ್ಕೂಟಗಳು ಅಥವಾ ಕೆ.ಎಂ.ಎಫ್. ಯಾವ ಉದ್ದೇಶದಿಂದ ಸ್ಥಾಪನೆ ಆಯಿತು, ಅವುಗಳ ಮೂಲಭೂತ ಉದ್ದೇಶಕ್ಕೆ ಹೊಡೆತ ಬೀಳುತ್ತದೆ, ನಡೆಸಲಿಕ್ಕೆ ಆಗುವುದಿಲ್ಲ. ಆ ಕಾರಣಕ್ಕೆ ಸರ್ಕಾರ ಇಡೀ ರಾಜ್ಯದಲ್ಲಿರತಕ್ಕಂತಹ 13 ಒಕ್ಕೂಟಗಳಲ್ಲಿ ಮತ್ತು ಒಂದು ಡೈರಿಯ ಹಾಲಿನ ದರಗಳಲ್ಲಿ ಏಕ ರೂಪದ ಬೆಲೆ ಇರಬೇಕು ಎನ್ನತಕ್ಕಂತಹ ಒಂದು ತೀರ್ಮಾನವನ್ನು ಒಕ್ಕೂಟದವರೇನು ಮಾಡಿದ್ದರು, ಅದನ್ನು ಸರ್ಕಾರ ಮನಗಂಡು ಅವರಿಗೆ ಇರತಕ್ಕಂತಹ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು, ಅವರ ತಿರ್ಮಾನ ಸರಿ ಇದೆ ಅಂತ ಹೇಳಿ ಸರ್ಕಾರಕ್ಕೆ ಅನ್ನಿಸಿದ್ದರಿಂದ ಇವತ್ತು ಸರ್ಕಾರ 10 ರೂ. ದರದಲ್ಲಿ ಹಾಲನ್ನು ಎಲ್ಲಾ ಡೈರಿಗಳಲ್ಲಿ ಮಾರುವುದಕ್ಕೆ ಒಪ್ಪಿದೆ. ಇವತ್ತಿನಿಂದ ಈ ದರವನ್ನು ಜಾರಿಗೆ ಕೊಟ್ಟಿದ್ದೇವೆ.

ಉಪಾಧ್ಯಕ್ಷರು:- ಈಗ ನಿಯಮ 69 ಮೇರೆಗೆ ವಿಷಯವನ್ನು ಪ್ರಸ್ತಾಪಿಸಿ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಆರಂಭಿಸಬಹುದು.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಒಂದೇ ಒಂದು ಸ್ಪಷ್ಟೀಕರಣವನ್ನು ಮಾನ್ಯ ಮಂತ್ರಿಗಳಿಂದ ಕೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ನಿನ್ನೆ ಪತ್ರಿಕೆಯಲ್ಲಿ ಎರಡು ಹೇಳಿಕೆ ಬಂದಿದೆ. ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಹಾಲು ಒಕ್ಕೂಟದ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಇಲ್ಲದಿರುವ ಕಾರಣ, ಈ ಏರಿಸಿರತಕ್ಕಂತಹ ಬೆಲೆಯನ್ನು ತಡೆಹಿಡಿಯಲಿಕ್ಕೆ ಆಜ್ಞೆ ಮಾಡಿದ್ದೇನೆ ಎಂದು ಮಾನ್ಯ ಮಂತ್ರಿಗಳು ಹೇಳಿಕೆಯಲ್ಲಿ ತಿಳಿಸಿದ್ದೀರಿ. ಅದೇ ಪತ್ರಿಕೆಯಲ್ಲಿ ಬೆಳಿಗ್ಗೆ ಹಾಲಿನ ರೇಟ್ ಜಾಸ್ತಿಯಾಗಿದೆ ಎಂದು ವರದಿಯಾಗಿದೆ. ತಮಗೂ ಮತ್ತು ಅಧಿಕಾರಿಗಳ ಸಂಬಂಧ ಹೇಗಿದೆ ಎಂಬುದು ನನ್ನ ಪ್ರಶ್ನೆಯಾಗಿದೆ. ತಾವು ಹಾಲು ಒಕ್ಕೂಟದ ಬಗ್ಗೆ ಹೇಳಿದಿರಿ, ಒಕ್ಕೂಟದ ವಾರ್ಷಿಕ ಖರ್ಚು ಎಷ್ಟು? ಮೊನ್ನೆ ಹಾಸನದಲ್ಲಿ

ಒಕ್ಕೂಟದ ವತಿಯಿಂದ ಒಂದು ಕಾರ್ಯಕ್ರಮ ಆಯಿತು. ಪಶು ಆಹಾರ ಉತ್ಪಾದನೆ ಮಾಡತಕ್ಕಂತಹ ಒಂದು ಕಾರ್ಖಾನೆಯನ್ನು ಓಪನ್ ಮಾಡತಕ್ಕ ಕಾರ್ಯಕ್ರಮ ಅದಾಗಿತ್ತು. ಸದರಿ ಕಾರ್ಯಕ್ರಮಕ್ಕೆ ತಗುಲಿದಂತಹ ಖರ್ಚು ಎಷ್ಟು? ಅದನ್ನು ಯಾವ ಲೆಕ್ಕದಲ್ಲಿ ಭರಿಸಿದ್ದೀರಿ? ಬಹುಶಃ ಇಡೀ ಹಾಸನ ನಗರವನ್ನು ಸುಮಾರು 5-10 ಕಿ.ಮೀ. ರಸ್ತೆಯನ್ನು ನೀರು ಹಾಕಿ ತೊಳೆದರು. ಏಕೆ ಅಂತ ಗೊತ್ತಿಲ್ಲ. ನೀವು ಅದರ ಖರ್ಚು ಯಾವುದಕ್ಕೆ ಹಾಕಿದ್ದೀರಿ? ಹಾಲು ಒಕ್ಕೂಟದ ಮೇಲೆ ಅದೆಲ್ಲಾ ಖರ್ಚು ಬರುತ್ತದೆ ಅಲ್ಲವೇ? ಹಾಲಿನ ದರ ಏರಿಸಿದ ಬಗ್ಗೆ ನಮಗೆ ಚಿಂತೆ ಇಲ್ಲ. ಹಾಳಾಗುತ್ತಿರುವುದನ್ನು ತಡೆದು, ಸಾಲದಿದ್ದರೆ ಏರಿಸಿ. ನೀವು ರೈತರಿಗೆ ಕೊಡುತ್ತೇವೆ ಎಂದು ಹೇಳಿ ಅನಾವಶ್ಯಕವಾಗಿ ಯದ್ವಾತದ್ವಾ ಖರ್ಚು ಮಾಡಬೇಡಿ. ನನ್ನ ಅಂದಾಜಿನ ಪ್ರಕಾರ ಸುಮಾರು 70-80 ಲಕ್ಷ ರೂ.ಗಳನ್ನು ಕಾರ್ಖಾನೆ ಓಪನ್ ಮಾಡುವ ಸಮಾರಂಭಕ್ಕೆ ಖರ್ಚು ಮಾಡಿದ್ದೀರಿ. ಆ ವೆಚ್ಚವನ್ನು ಇವತ್ತು ಯಾವ ಲೆಕ್ಕದಲ್ಲಿ ಹಾಕಿದ್ದೀರಿ ಎಂಬುದನ್ನು ಹೇಳಿ ನೋಡೋಣ.

ಶ್ರೀ ಬಿ.ಬಿ.ನಿಂಗಯ್ಯ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದು ನಿಜ. ನಾನು ನಿನ್ನೆ ನನ್ನ ಕಾರ್ಯದರ್ಶಿಯವರ ಮೂಲಕ ಕೆ.ಎಂ.ಎಫ್.ನ ವ್ಯವಸ್ಥಾಪಕ ನಿರ್ದೇಶಕರಿಗೆ ಒಂದು ಸೂಚನೆಯನ್ನು ಕಳುಹಿಸಿದ್ದೆ. ನನಗೆ ಹಾಲಿನ ದರವನ್ನು ಏಕೆ ಏರಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು. ನಾನು ಹಾಲು ಒಕ್ಕೂಟಗಳ ಜೊತೆಗೆ ಚರ್ಚಿಸಿ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲೂ ಕೂಡ ಚರ್ಚಿಸಿ ಹಾಲಿನ ದರ ಏರಿಸುವ ತೀರ್ಮಾನಕ್ಕೆ ಬಂದಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಶಿವಪ್ಪನವರು ಒಂದು ಪ್ರಶ್ನೆ ಎತ್ತಿದರು. ನಮಗೂ ಅಧಿಕಾರಿಗಳಿಗೂ ಸಂಬಂಧ ಚೆನ್ನಾಗಿ ಇದೆ ಎಂದು ನಾನು ಹೇಳುತ್ತೇನೆ. ಯಾವುದೇ ರೀತಿಯ ವ್ಯತ್ಯಾಸಗಳು, ಅಥವಾ ಭಿನ್ನಾಭಿಪ್ರಾಯಗಳು ನಮ್ಮಲ್ಲಿಲ್ಲ. ಅಲ್ಲಿ ಸೋರಿ ಹೋಗದ ಹಾಗೆ, ದುಂದು ವೆಚ್ಚವಾಗದ ಹಾಗೆ ನೀವು ನಿಗಾ ವಹಿಸಬೇಕು ಎಂಬ ಒಂದು ಸಲಹೆಯನ್ನು ತಾವೇನು ಕೊಟ್ಟಿದ್ದೀರಿ, ಅದನ್ನು ನಾನು ಒಪ್ಪುತ್ತೇನೆ. ಮುಂದೆ ಎಲ್ಲಿಯಾದರೂ ಕೂಡ ಲೀಕೇಜಸ್ ಇರಲಿ, ಅಥವಾ ಸೋರಿ ಹೋಗುವುದು ಇರಲಿ, ಅದರ ಬಗ್ಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳುತ್ತದೆ, ಗಮನ ಹರಿಸುತ್ತದೆ, ಅದರ ಬಗ್ಗೆ ಯೋಚನೆ ಮಾಡುತ್ತದೆ ಎಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಇವತ್ತು ತಮಗೆ ಏಕೆ ಆ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ಕಳೆದ 15 ದಿನದಿಂದ ಬೆಂಗಳೂರು ಡೈರಿಯವರು ಪ್ರತಿ ದಿನ ಮೂರೂವರೆ ಲಕ್ಷ ರೂ. ಲಾಸ್ ಮಾಡಿಕೊಂಡು ಹಾಲನ್ನು ಮಾರುತ್ತಿದ್ದಾರೆ. ಬಹುಶಃ ಒಂದು ತಿಂಗಳಿಗೆ 1 ಕೋಟಿ ರೂ.ಗಳ ಮೇಲೆ ಲಾಸ್ ಆಗುತ್ತದೆ. ಅಷ್ಟು ದೊಡ್ಡ ಮೊತ್ತವನ್ನು ಭರಿಸತಕ್ಕಂತಹ ಅಥವಾ ತಡೆದುಕೊಳ್ಳತಕ್ಕಂತಹ ಶಕ್ತಿ ಆ ಒಕ್ಕೂಟಗಳಿಗೆ ಇಲ್ಲ. ಎರಡನೆಯದು, ಇವತ್ತು ಯಾವ ಯಾವ ರೀತಿಯಲ್ಲಿ ಇದು ಮಾಡಿದಿರಿ ಎಂದು ನೀವು ಹೇಳುತ್ತಿದ್ದೀರಿ. ಇವತ್ತು ಏರಿಸಿರತಕ್ಕಂತಹ ದರದ ಅಡಿಯಲ್ಲಿ ಯಾವುದಕ್ಕೆ ಎಷ್ಟೆಷ್ಟು ಖರ್ಚು ಬರುತ್ತದೆ ಅಂದರೆ, 7.64 ರೂ. ರೈತರಿಗೆ ಕೊಡುತ್ತೇವೆ. ಹಾಲಿನ ಸಂಸ್ಕರಣ ದರವನ್ನು ಕೂಡ ನಿಗದಿ

ಮಾಡಿದ್ದೇವೆ. ಶೇಖರಣೆ ಮತ್ತು ತಾಂತ್ರಿಕ ವಿಭಾಗದ ಖರ್ಚು ಬೇರೆಯಾಗುತ್ತದೆ. 25 ಪೈಸೆ ಹಾಲಿನ ಶೇಖರಣೆ ವೆಚ್ಚವಾಗುತ್ತದೆ. ಸಾರಿಗೆ ಮತ್ತು ಟ್ಯಾಂಕರ್ ವೆಚ್ಚ ಕ್ರಮವಾಗಿ 28 ಪೈಸೆ ಮತ್ತು 13 ಪೈಸೆಯಾಗುತ್ತದೆ. ಪ್ಯಾಕಿಂಗ್ ವೆಚ್ಚ 48 ಪೈಸೆ, ಸಂಸ್ಕರಣೆ ಮತ್ತು ಗುಣಮಟ್ಟ 69 ಪೈಸೆ, ಆಡಳಿತ ಮತ್ತು ಸಿಬ್ಬಂದಿ ವೆಚ್ಚ 27 ಪೈಸೆ, ಮಾರುಕಟ್ಟೆ ಮತ್ತು ವಿತರಣಾ ವೆಚ್ಚ 38 ಪೈಸೆ, ಬಡ್ಡಿ ಮತ್ತು ಬ್ಯಾಂಕ್ ಚಾರ್ಜಸ್ 3 ಪೈಸೆ, ಸೊಸೈಟಿ ಲೆವಿ ಮತ್ತು ಕಾರ್ಪಸ್ ಫಂಡ್ 14 ಪೈಸೆ, ಹೀಗೆ ಸುಮಾರು ಒಂದು ಲೀಟರ್ ಹಾಲಿಗೆ 10.13 ರೂ. ಬೀಳುತ್ತದೆ. ನಾವು 10 ರೂ.ಗೆ ಮಾರುತ್ತಿದ್ದೇವೆ. ಅಂದರೆ 13 ಪೈಸೆ ಪ್ರತಿ ಲೀಟರ್‌ಗೆ ಲಾಸ್ ಆಗುತ್ತಿದೆ. ಅದನ್ನು ಇತರ ಹಾಲಿನ ಉತ್ಪನ್ನಗಳ ಮಾರಾಟದ ಮೂಲಕ ಸರಿದೂಗಿಸಿಕೊಳ್ಳಿ ಎಂದು ನಾವು ಅವರಿಗೆ ಸೂಚನೆ ಕೊಟ್ಟಿದ್ದೇವೆ. ಹಾಲಿನ ದರ ಏರಿಸಿದ ನಂತರ 1.20 ರೂ. ಹೆಚ್ಚಿಗೆ ರೈತರಿಗೆ ಕೊಡುತ್ತಿದ್ದೇವೆ. ಆದುದರಿಂದ ನಾವು ಮಾನ್ಯ ಉಪಾಧ್ಯಕ್ಷರ ಮೂಲಕ ಎಲ್ಲಾ ಮಾನ್ಯ ಈ ಮನೆಯ ಹಿರಿಯ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ರೈತರ ದೃಷ್ಟಿಯಿಂದ ಮಾಡಿರತಕ್ಕ ಈ ತೀರ್ಮಾನ ಏನಿದೆ, ಅದಕ್ಕೆ ತಾವು ಸಹಕಾರ ಕೊಡಬೇಕು. ಜೊತೆಗೆ ನಾವೂ ಕೂಡ ಇದನ್ನು ಒಂದು ಹೆಜ್ಜೆ ಮುಂದೆ ಹೋಗಿ ಗ್ರಾಹಕರಿಗೆ ಯಾವ ರೀತಿಯಲ್ಲಿ ದರ ನಿಗದಿ ಮಾಡಿದರೆ ಅನುಕೂಲ ಮಾಡಬಹುದು ಎಂಬುದನ್ನೂ ಕೂಡ ಸರ್ಕಾರ ಪರಿಶೀಲಿಸುತ್ತದೆ ಎಂಬ ಭರವಸೆಯನ್ನು ಮಾನ್ಯ ಉಪಾಧ್ಯಕ್ಷರ ಮೂಲಕ ತಮಗೆ ಕೊಡಲಿಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೇ, ನಾಗರೀಕರ ಮೇಲೆ ಹೊರೆಯನ್ನು ಹೇರುವುದಕ್ಕಿಂತ ಸರ್ಕಾರದವರು ಕ್ಯಾಟಲ್ ಫೀಡ್‌ಗೆ ಏಕೆ ಸಬ್ಸಿಡಿ ಕೊಡಬಾರದು?

ಶ್ರೀ ಹೆಚ್.ಡಿ.ಬಸವರಾಜ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳಿಂದ ಒಂದೇ ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ಈಗಾಗಲೇ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈಗ ನಿಯಮ 69ರ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಹಾಲಿನ ದರ 10 ರೂ.ಗಳಿಗೆ ಏರಿಸಿರುವ ಬಗ್ಗೆ ಹೇಳಿದರು, 8-10 ತಿಂಗಳುಗಳಷ್ಟು ಹಿಂದೆಯೇ ನೀಲಿಗಿರೀಸ್ ಮುಂತಾದ ಪ್ರೈವೇಟ್ ಡೈರಿಯವರು ಹಾಲಿನ ದರವನ್ನು ಜಾಸ್ತಿ ಮಾಡಿದ್ದಾರೆ ಎಂದು.

(ಗೊಂದಲ)

ಉಪಾಧ್ಯಕ್ಷರು:- ಇಷ್ಟೊಂದು ಜನ ಒಮ್ಮೆಗೇ ನಿಂತು ಮಾತನಾಡಿದರೆ ನಾನು ಸಭೆಯನ್ನು ನಡೆಸುವುದು ಹೇಗೆ?

(ಗೊಂದಲ)

ಶ್ರೀ ಸಿ.ಆರ್.ಸಗೀರ್ ಅಹಮದ್:- ಇದು ಜನತಾ ದಳದ ಸರ್ಕಾರ ಅಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್:- ಜನತಾದಳ ಸರ್ಕಾರ ಎಲ್ಲಾ ದರಗಳನ್ನು ಏರಿಸುವುದರಲ್ಲಿ ತೊಡಗಿದೆ.

5. ನಿಯಮ 69ರ ಮೇರೆಗೆ ಚರ್ಚೆ.

ವಿಷಯ: ರಾಜ್ಯದಲ್ಲಿ ಸಾರಾಯಿ ಮಾರಾಟ ನಿಷೇಧ ವಿಧಿಸುವಲ್ಲಿ ಉಂಟಾಗುತ್ತಿರುವ ವಿಳಂಬ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಸನ್ಮಾನ್ಯ ಉಪಾಧ್ಯಕ್ಷರೇ, ನಿಯಮ 69ರಲ್ಲಿ ಈ ಸಾರ್ವಜನಿಕ ಮಹತ್ವದ ಒಂದು ವಿಚಾರದ ಬಗ್ಗೆ ರಾಜ್ಯದಲ್ಲಿ ಸಾರಾಯಿ ಮಾರಾಟ ನಿಷೇಧ ವಿಧಿಸುವಲ್ಲಿ ಉಂಟಾಗುತ್ತಿರುವಂತಹ ವಿಳಂಬದ ಬಗ್ಗೆ ಪ್ರಸ್ತಾವನೆ ಮಾಡಬೇಕೆಂದು ನಾನು, ರಾಮದಾಸ್‌ರವರು, ಪ್ರಮೀಳಾ ನೇಸರ್ಗಿಯವರು, ಆಯನೂರ್ ಮಂಜುನಾಥ್‌ರವರು ಮತ್ತು ವಿಶ್ವೇಶ್ವರ ಹೆಗಡೆಯವರು ತಮ್ಮಲ್ಲಿ ವಿನಂತಿ ಮಾಡಿದ್ದಕ್ಕೆ ಈಗ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತಾ ಅತ್ಯಂತ ಪ್ರಮುಖವಾದ ವಿಚಾರವನ್ನು ನಾನು ಈ ಸದನದ ಗಮನಕ್ಕೆ, ಅಬಕಾರಿ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಪ್ರತಿ ವರ್ಷ ನಾವು ಏನು ಜುಲೈನಿಂದ ಜೂನ್‌ವರೆಗೆ ಈ ಅಬಕಾರಿ ಹರಾಜು ಮಾಡುತ್ತಿದ್ದೇವೆ, ಅದನ್ನು ಈ ವರ್ಷ ಕೈಬಿಟ್ಟು, ಈ ಸಾರಾಯಿ ಹರಾಜನ್ನು ಜುಲೈನಿಂದ ಅಕ್ಟೋಬರ್‌ವರೆಗೆ ಈ ಹಿಂದೆ ಯಾರು ಅಬಕಾರಿ ಗುತ್ತಿಗೆದಾರರು ಇದ್ದರು ಅವರಿಗೆ ಶೇಕಡ 8 ಏರಿಕೆ ಆಧಾರದ ಮೇಲೆ ಗುತ್ತಿಗೆ ಕೊಟ್ಟು ವ್ಯವಹಾರ ಮಾಡಬೇಕೆಂದು ತಾವು ತೀರ್ಮಾನ ತೆಗೆದುಕೊಂಡ ಪರಿಣಾಮ ನಾನು ಇವತ್ತು ಅಲ್ಲ, ಶಾಣಪ್ಪನವರೇ, ತಾವು ಸಚಿವರಾಗಿ ಪ್ರಾಮಾಣಿಕವಾಗಿ ಇಲ್ಲಿ ಬಂದಿದ್ದೀರಿ, ಏಕೆ ಯಾರೋ ತಿಂದು ತೇಗುವಂತಹ ಈ ಒಂದು ಇಲಾಖೆಗೆ ತಾವು ಏಕೆ ಸಾಕ್ಷಿಯಾಗಿ ಈ ಇಲಾಖೆ ವಹಿಸಿಕೊಂಡಿರೋ ಗೊತ್ತಿಲ್ಲ. ಇವತ್ತು ನಾನು ನಿಮಗೆ ಹೇಳುತ್ತೇನೆ, ನಾಳೆ ಮುಂದಿನ ಜೂನ್ ಜುಲೈನಲ್ಲಿ ಹರಾಜಾಗುವಂತಹ ಕಾಲಕ್ಕೆ ತಾವು ಹೇಳಬೇಕು, ಇವತ್ತು ಕನಿಷ್ಟ ನಿಮ್ಮ ಈ ಅಬಕಾರಿ ನೀತಿಯಿಂದ ಸರ್ಕಾರದ ಖಜಾನೆಗೆ ತಾವು ನಿರೀಕ್ಷೆ ಮಾಡುತ್ತಿರುವಂತಹ ಹಣ 125ರಿಂದ 150 ಕೋಟಿ ರೂಪಾಯಿ ಕಡಿಮೆಯಾಗುತ್ತದೆ. 1996-97ನೇ ಸಾಲಿನಲ್ಲಿ ಈ ಸಾರಾಯಿ ಬಾಬ್ತು ಒಂದರಲ್ಲಿ ತಾವು 626 ಕೋಟಿ 19 ಲಕ್ಷ ರೂಪಾಯಿಗಳ ಆದಾಯವನ್ನು ತಾವು